# ಕೆ. ಶಾಮರಾಯಾಚಾರ್ಯ



ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಮೇಲ್ಮನೆ, ಕನ್ನಡ ಭವನ
ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ಶಿಲ್ಪ ಕಲಾವಿದರ ಮಾಲೆ - **5**

# ಕೆ. ಶಾಮರಾಯಾಚಾರ್ಯ


ಕಾ.ವಾ. ಆಚಾರ್ಯ ಶಿರ್ವ



ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಮೇಲ್ಮನೆ, ಕನ್ನಡ ಭವನ

ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

K. SHAMARAYACHARYA:
A Monograph By : Ka.Va. Acharya Shirva,
Published by : N. Marishamachar,
Registrar, Karnataka Shilpakala Academy,
Ist Floor, Kannada Bhavana, J.C. Road,
Bangalore - 560 002

ಮೊದಲ ಮುದ್ರಣ : **2000**

ಪ್ರತಿಗಳು : 1000

*ಸಂಪಾದಕ :*

**ಎನ್. ಮರಿಶಾಮಾಚಾರ್**

*ಬೆಲೆ* : ರೂ. **15-00**

ಮುಖಪುಟ *ಚಿತ್ರ* : ನವದುರ್ಗ

ಮುದ್ರಕರು *:*

ರಶ್ಮಿ ಟೈಪೋಸೆಟ್

ಬೆಂಗಳೂರು - 560 027


ದೂರವಾಣಿ : 2243550

# ಮೊದಲ ಮಾತು

ನಮ್ಮ ರಾಜ್ಯ ಶಿಲ್ಪಕಲೆಗೆ ವಿಶ್ವದಲ್ಲೇ ಹೆಸರು ಪಡೆದಿದ್ದು. 'ಶಿಲ್ಪಕಲೆಯ ತವರೂರು' ಎಂದು ಕರೆಯಲ್ಪಟ್ಟಿದೆ. ಈ ನಾಡಿನಲ್ಲಿ ಅನೇಕ ಶಿಲ್ಪಶೈಲಿಗಳು ಹುಟ್ಟಿ, ಅವು ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿವೆ. ನಮ್ಮ ರಾಜ್ಯದಲ್ಲಿ ಶಿಲ್ಪಕಲೆಗಾಗಿ ದುಡಿದವರು ಹಲವಾರು ಶಿಲ್ಪಿಗಳು. ಕೆಲವು ಶಿಲ್ಪಿಗಳು 'ಶಿಲ್ಪ ರಚಿಸುವುದೇ ತಮ್ಮ ಕಾಯಕ'ವೆಂದು ತಿಳಿದು, ಶಿಲ್ಪದ ಮೇಲೆ ತಮ್ಮ ಹೆಸರುಗಳನ್ನು ನಮೂದಿಸಿರುವುದಿಲ್ಲ. ಸಾಂಪ್ರದಾಯಿಕವಾಗಿ ಶಿಲ್ಪಕಲೆ ಬೆಳೆದು ಬಂದಿದ್ದು ಇಂದಿಗೂ ಈ ಕಲೆಗಳನ್ನು ಉಳಿಸಿ, ಬೆಳೆಸಿಕೊಂಡು ಬಂದಿರುವವರು ನಮ್ಮಲ್ಲಿದ್ದಾರೆ. ಅಕಾಡೆಮಿ ಇಂತಹ ಹಿರಿಯ ಶಿಲ್ಪಕಲಾವಿದರು ಮತ್ತು ಅವರ ಕೃತಿಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯನ್ನು ಪ್ರಾರಂಭಿಸಿದೆ. ಈ ಪುಸ್ತಕಗಳು ಈ ಶಿಲ್ಪಿಗಳ ಮತ್ತು ಕೃತಿಗಳ ಪರಿಚಯ ಮಾಡಿಸುವುದರ ಜೊತೆಗೆ ರಾಜ್ಯದಲ್ಲಿ ಶಿಲ್ಪಕಲೆ ಬೆಳೆದು ಬಂದ ದಾರಿ ಮತ್ತು ಅದರ ಚರಿತ್ರೆಯನ್ನು ತಿಳಿಯಲು ಸಹಾಯಕವಾಗುವುದು.

ಈ ಯೋಜನೆಯಲ್ಲಿ ನಮ್ಮ ನಾಡಿನ ಹೆಸರಾಂತ ಶಿಲ್ಪಿಗಳಾದ ಶ್ರೀ ಕೆ. ಶಾಮರಾಯಾಚಾರ್ಯ ಅವರ ಬಗ್ಗೆ ಶ್ರೀ ಕಾ.ವಾ. ಆಚಾರ್ಯ ಶಿರ್ವ ಅವರು ಪುಸ್ತಕವನ್ನು ಬರೆದುಕೊಟ್ಟಿದ್ದಾರೆ. ಶ್ರೀಯುತರು ಶಿಲ್ಪಿಯ ಬಗ್ಗೆ ಚೆನ್ನಾಗಿ ಅರಿತಿದ್ದು, ಅವರ ಜೀವನ ಮತ್ತು ಕೃತಿಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ. ಶ್ರೀಯುತರಿಗೆ ಅಕಾಡೆಮಿಯ ಪರವಾಗಿ ವಂದನೆಗಳನ್ನು ಸಲ್ಲಿಸುವೆ. ಅಕಾಡೆಮಿಯು ಕರ್ನಾಟಕ ಸರ್ಕಾರದ 'ಜಕಣಾಚಾರಿ' ಪ್ರಶಸ್ತಿ ಪಡೆದವರ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಲು ತೀರ್ಮಾನಿಸಿದೆ. ನಮ್ಮ ನಾಡಿನ ಜನರು ಅಕಾಡೆಮಿಯ ಈ ಸಾಧನೆಯನ್ನು ಸ್ವಾಗತಿಸುವರೆಂದು ಆಶಿಸುತ್ತೇನೆ.

ಸಿ. ಪರಮೇಶ್ವಾರಾಚಾರ್
ಅಧ್ಯಕ್ಷರು
ಕರ್ನಾಟಕ ಶಿಲ್ಪಕಲಾ ಅಕಾಡೆಮಿ



# ಕೆ. ಶಾಮರಾಯಾಚಾರ್ಯ

• ಕಾ.ವಾ. ಆಚಾರ್ಯ ಶಿರ್ವ

## ಪ್ರತಿಭೆ

ವಿಭೂತಿ, ತಿಲಕ ಶೋಭಿತ ಶಿಖಾ (ಜುಟ್ಟು)ಧಾರಿ, ಮೊಣಕಾಲು ಗಂಟಿನ ಕಚ್ಚೆ, ಬರಿಮೈ, ಎದೆಯನ್ನು ಆವರಿಸಿಕೊಂಡ ಶಾಲಿನಿಂದ ಅಲಂಕೃತ ಶಿಲ್ಪಾಚಾರ್ಯರೊಬ್ಬರು ದೇಗುಲದ ರಥದ ಬೊಂಬೆಗಳ ರಿಪೇರಿಯಲ್ಲಿ ತಲ್ಲೀನರಾಗಿದ್ದರೆ, ಪಕ್ಕದಲ್ಲೇ ಚೆಡ್ಡಿ ಬಾಲಕ ರಥದ ಅಲಂಕಾರ-ಬಳ್ಳಿಗೆ, ಸುಸ್ವರೂಪವನ್ನು ನೀಡುವುದರಲ್ಲಿ ತನ್ಮಯನಾಗಿ ಆನಂದವನ್ನು ಅನುಭವಿಸುತ್ತಿರುವ ಒಂದು ಮಧುರ ಸನ್ನಿವೇಶ. ದೇವರ ದರ್ಶನಕ್ಕೆ ಆಗಮಿಸುವ ಭಕ್ತ ಜನಕ್ಕೆ ಬಾಲಕನ ಕೈಚಳಕ ಅದೊಂದು ಕೌತುಕವೆನಿಸಿ, ಒಂದು ಅರೆಗಳಿಗೆ ಬಾಲಕನ ಶಿಲ್ಪ ಕಾರ್ಯದಲ್ಲಿ ದೃಷ್ಟಿನೆಟ್ಟು, ತುಟಿಗಳಲ್ಲಿ ಆನಂದ ಅರಳುತ್ತಿದ್ದಂತೆ ಮುಂದೆ ಸಾಗುತ್ತಿದ್ದರು.

ಅಂದು ದೇವ ಸನ್ನಿಧಿಯಲ್ಲಿ ತನ್ನ ಪ್ರತಿಭೆಗೆ ಒಪ್ಪವನ್ನು ನೀಡುತ್ತಿದ್ದ ಬಾಲಕ ಮತ್ತಾರೂ ಅಲ್ಲ; ಇಂದಿನ ಜಕಣಾಚಾರ್ಯ ಪ್ರಶಸ್ತಿ ವಿಜೇತ ಖ್ಯಾತಶಿಲ್ಪಿ, ಕಾರ್ಕಳದ ವಿಜಯಶಿಲ್ಪ ಶಾಲೆಯ ಸ್ಥಾಪಕ, ಶಿಲ್ಪಾಚಾರ್ಯ ಶಾಮರಾಯಾಚಾರ್ಯರು.

## ಬಾಲ್ಯ

ಸುತ್ತುಮುತ್ತಲೆಲ್ಲ ಹಸಿರುಕಾಡು. ಅಲ್ಲಲ್ಲಿ ತೆಂಗಿನ ತೋಟ. ಆಹ್ಲಾದಕರ ನೋಟ. ಇದು ಕಟಪಾಡಿ ಸಮೀಪದ ಕುರ್ಕಾಲಿನ ಪರಿಸರ. ಇಲ್ಲೊಂದು ಪುಟ್ಟಮನೆ. ಈ ಮನೆಯಲ್ಲೊಂದು ಪುಟ್ಟಸಂಸಾರ. ಸಂಸಾರದ ಯಜಮಾನ ದಾರು (ಮರ) ಶಿಲ್ಪಿ ಜೋಗಪ್ಪಾಚಾರ್ಯ. ಪತ್ನಿ ಶಿರ್ವದ ಕಲ್ಯಾಣಿಯಮ್ಮ. ಎರಡು ವರುಷಗಳ ಪುಟ್ಟ ಮಗು. ಜೊತೆಗೆ, ತೀರ್ಥರೂಪರಾದ ನಾಗಪ್ಪಾಚಾರ್ಯ, ಮಾತೃಶ್ರೀ ಸೀತಮ್ಮ.

ನಾಗಪ್ಪಾಚಾರ್ಯರು ನೇಗಿಲು ರಚನೆಯಲ್ಲಿ ಸಿದ್ಧಹಸ್ತರು. ಜೀವನ ನಿರ್ವಹಣೆಗಾಗಿ ಕೃಷಿಯನ್ನು ಅವಲಂಬಿಸಿದ್ದರು. ಅದು ಅವರ ನಿವೃತ್ತಿಯಕಾಲ. ಜೋಗಪ್ಪಾಚಾರ್ಯರಿಗೆ ಕೃಷಿಯೊಂದಿಗೆ ಕಲಾತ್ಮಕ ಬಾಗಿಲುರಚನೆ, ರಥದ ರಿಪೇರಿಯ ಕಾಯಕ. ಇದೇ ಅವರ

ಬದುಕಿಗೆ ಆಧಾರ. ದಕ್ಷಿಣ ಕನ್ನಡದವರಿಗೆ ಯಕ್ಷಗಾನವೆಂದರೆ ವಿಶೇಷ ಮಮತೆ. ಜೋಗಪ್ಪಾಚಾರ್ಯರಿಗೂ ಅಷ್ಟೆ - ಯಕ್ಷಗಾನವೆಂದರೆ ಮೆಚ್ಚು. ಆದರೆ, ಬಣ್ಣ ಹಚ್ಚಿ ಕುಣಿಯುವ ಮನಸ್ಸು ಮಾಡಿದವರಲ್ಲ. ಯಕ್ಷಗಾನ ತಾಳಮದ್ದಳೆಯಲ್ಲಿ ಪಾತ್ರವಹಿಸುವ ಖಯಾಲಿ.

ಸಾವಿರದ ಒಂಭೈನೂರ ಇಪ್ಪತ್ತಾರನೆಯ ಇಸವಿಯ ಫೆಬ್ರವರಿ ತಿಂಗಳ ಹದಿನೈದನೇ ದಿನ ಜೋಗಪ್ಪಾಚಾರ್ಯರ ಮನೆಯಲ್ಲಿ ದ್ವಿತೀಯ ಗಂಡು ಮಗುವಿನ ಜನನವಾಯಿತು. ಈ ಮಗವಿಗೆ ಶಾಮರಾಯ ಎಂಬ ಹೆಸರನ್ನಿಟ್ಟರು.

ಅಜ್ಜ, ಅಜ್ಜಿ, ತಂದೆ, ತಾಯಿ, ಅಣ್ಣ ಎಲ್ಲರ ಕೊಂಡಾಟದ ಕೂಸಾಗಿ ಬೆಳೆದ ಶಾಮರಾಯ.

ಜೋಗಪ್ಪಾಚಾರ್ಯರ ದಾರು ಶಿಲ್ಪಕಾರ್ಯ ಮಂದವಾಗುತ್ತ ಸಾಗಿತ್ತು. ತಮ್ಮ ಶಿಲ್ಪಕಾರ್ಯಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಬಯಸಿದ ಜೋಗಪ್ಪಾಚಾರ್ಯರು ತಮ್ಮ ಸಂಸಾರವನ್ನು ಸಮೀಪದ ನಕ್ರೆಗೆ ಸಾಗಿಸಿದರು.

ನಕ್ರೆಯ ಕಿನ್ನಿ ಪೆತ್ತಜೆಯಲ್ಲಿ ಜೋಗಪ್ಪಾಚಾರ್ಯರ ಮನೆ. ಮನೆಯ ಹಿಂದಿನ ಎತ್ತರದ ಗುಡ್ಡದಲ್ಲಿ ಭೂತಸ್ಥಾನ.

ನಕ್ರೆಯಲ್ಲಿಯ ಶಾಮರಾಯನ ಬದುಕಿನಲ್ಲಿ ಈ ಭೂತಸ್ಥಾನದ ಕೋಲದ ದಿನಗಳು ಮರೆಯಲಾಗದ ಸವಿದಿನಗಳು. ಅಜ್ಜನ ಕೈ ಹಿಡಿದುಕೊಂಡು ಕೋಲಕ್ಕೆ ನಡೆದು ಸಂತೆ ಸುತ್ತಾಡಿ, ಭೂತದ ಕುಣಿತ, ಭೂತದ ಅಬ್ಬರದ ಕಿರುಚಾಟವನ್ನೆಲ್ಲ ಕಂಡು ಖುಶಿಯಿಂದ ಮರಳುತ್ತಿದ್ದ ದಿನಗಳು ಅವು.

ಐದನೆಯ ವರ್ಷದಲ್ಲಿ ನಕ್ರೆಯ ಪ್ರಾಥಮಿಕ ಶಾಲೆಗೆ ಶಾಮರಾಯನ ಪ್ರವೇಶವಾಯಿತು. ಎರಡು ವರುಷಗಳ ಅಧ್ಯಯನ ಇಲ್ಲಿ ನಡೆಯಿತು.

ನಕ್ರೆ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ದೂಮಣ್ಣ ಮಾಸ್ತರರು. ತುಂಬ ಶಿಸ್ತಿನ ಮುಖ್ಯೋಪಾಧ್ಯಾಯರು. ಮಕ್ಕಳು ಎಂದೂ ಶಾಲೆಗೆ ತಡವಾಗಿ ಬರಬಾರದು - ಎಂಬುದು ಅವರ ಕಟ್ಟಾಜ್ಞೆ. ಅಕಸ್ಮಾತ್ ತಡವಾದರೆ ಪೆಟ್ಟು ಅಥವಾ ಬೆಂಚನ್ನೇರಿ ನಿಲ್ಲುವ ಶಿಕ್ಷೆ. ಶಾಮರಾಯ ತನ್ನ ಕಿನ್ನಿ ಪೆತ್ತಜೆಯ ಮನೆಯಿಂದ ಎರಡು ಕಿ.ಮೀ. ದೂರದ ಶಾಲೆಯನ್ನು ನಡೆದೇ ಸೇರಬೇಕು. ಅಪರೂಪದಲ್ಲಿ ತಡವಾಗಿ ಶಾಲೆಯನ್ನು ಸೇರಿ ಒಂದೆರಡು ಬಾರಿ ಶಾಮರಾಯನೂ ಬೆಂಚನ್ನೇರಿದ್ದ.

ಮುಖ್ಯೋಪಾಧ್ಯಾಯರ ಶಿಸ್ತಿನ ಜೀವನ ಶಾಮರಾಯನ ಮೇಲೂ ತುಂಬು ಪ್ರಭಾವವನ್ನೇ ಬೀರಿತು.

ದಿನವೂ ನಡೆದು ಮನೆ ಸೇರಬೇಕಾದ ಶಾಮರಾಯ ಹಾಗೂ ಗೆಳೆಯರಿಗೆ ಒಂದೊಂದು ದಿನ ಎತ್ತಿನ ಗಾಡಿಯಲ್ಲಿ ಪಯಣಿಸುವ ಯೋಗ. ಶಾಮರಾಯನ ಮನೆಯ ಪಕ್ಕದ ಕಾಡಿನಿಂದ ಕಟ್ಟಿಗೆ ತರುವ ಕಾಯಕ ಗಾಡಿಕಾರನದು. ಗಾಡಿ ಪ್ರಯಾಣದ ಸುಖವನ್ನು ನೀಡಿದ್ದಕ್ಕಾಗಿ ಮಕ್ಕಳು ಒಂದಷ್ಟು ಕಟ್ಟಿಗೆಯನ್ನು ಗಾಡಿಕಾರನ ಗಾಡಿಗೆ ತುಂಬಬೇಕು. ಮಕ್ಕಳು ಉತ್ಸಾಹದಿಂದ ಗಾಡಿಗೆ ಕಟ್ಟಿಗೆಯನ್ನು ತುಂಬಿ ತಮ್ಮ ತಮ್ಮ ಮನೆಯ ದಾರಿ ಹಿಡಿಯುತ್ತಿದ್ದರು. ಶಾಮರಾಯನಿಗೂ ಏನೋ ಸಾಧಿಸಿದ ಸಂತೃಪ್ತಿ.

ವರ್ಷದಲ್ಲೊಮ್ಮೆ ನಕ್ರೆಯ ಶಾಲೆಯ ಹತ್ತಿರ ನಡೆಯುವ ಪೆರ್ಡೂರು ಯಕ್ಷಗಾನ ಮೇಳದ ಬಯಲಾಟವೆಂದರೆ ಊರಿಗೇ ಹಬ್ಬವಿದ್ದಂತೆ. ಅಜ್ಜನೊಂದಿಗೆ ಶಾಮರಾಯನೂ ನಡೆದು, ರಾತ್ರಿ ಇಡೀ ಕುಳಿತು, ಯಕ್ಷಗಾನದ ಪೌರಾಣಿಕ ಕಥೆ, ಅಲ್ಲಿಯ ಪಾತ್ರಗಳ ಹಾವಭಾವ ರಸಮಯ ಸನ್ನಿವೇಶಗಳನ್ನು ತನ್ನೊಳಗೆ ತುಂಬಿಕೊಂಡು ಸುಖಿಸುತ್ತಿದ್ದ ಶಾಮರಾಯ.

ಬದುಕಿನ ಕಷ್ಟಗಳಿಂದ ಭಾರಗೊಂಡ ಮನಸ್ಸನ್ನು ಹಬ್ಬಗಳು ಹಗುರ ಗೊಳಿಸುವುದರಿಂದಲೇ ಪ್ರತಿಯೊಂದು ಸಂಸಾರದಲ್ಲೂ ಹಬ್ಬಗಳನ್ನು ತಮ್ಮ ಇತಿಮಿತಿಗೆ ತಕ್ಕಂತೆ ಆಚರಿಸುವುದು ಪದ್ಧತಿ. ಜೊಗಪ್ಪಾಚಾರ್ಯರ ಮನೆಯ ಹಬ್ಬಗಳ ಆಚರಣೆ ಸರಳ. ಅಷ್ಟೇ ಸಂಪ್ರದಾಯಬದ್ಧ.

ಹಬ್ಬಗಳು ಬಂತೆಂದರೆ ಶಾಮರಾಯನ ಪಾಲಿಗಂತೂ ಸ್ವರ್ಗಸುಖವೇ ಭೂಮಿಗಿಳಿದು ಬಂದಂತೆ. ದೀಪಾವಳಿಯಂತೂ ಶಾಮರಾಯನ ಮನಸ್ಸಿನೊಳಗೆ ಗಟ್ಟಿಯಾಗಿ ಉಳಿದು ಆನಂದವನ್ನು ಉಕ್ಕಿಸುವ ಹಬ್ಬ. ಅಜ್ಜನೊಂದಿಗೆ ಕುಳಿತು ಗೂಡು ದೀಪವನ್ನು ರಚಿಸಿ, ದೀಪವನ್ನು ಹಚ್ಚಿ ಗೂಡುದೀಪವನ್ನು ಎತ್ತರಕ್ಕೆ ಏರಿಸುವ ಸಂಭ್ರಮ. ರಾತ್ರಿಗೆ ಗದ್ದೆಗೆ ದೀಪವಿಟ್ಟು ಬಲಿಯೇಂದ್ರನಿಗೆ ಕರೆ ನೀಡುವ ಉಲ್ಲಾಸ, ತಮ್ಮ ಗದ್ದೆಯ ಸುತ್ತಮುತ್ತಲಿನ ಗದ್ದೆಗಳಲ್ಲಿ ನಕ್ಷತ್ರದಂತೆ ಮಿನುಗುವ ನೂರಾರು ಹಣತೆ ದೀಪಗಳ ಮಾಯಾಲೋಕದಲ್ಲಿ ಕರಗುವ ಕ್ಷಣ. ಇವೆಲ್ಲವೂ ಶಾಮರಾಯನ ಬದುಕಿನ ರಂಗುರಂಗಿನ ದಿನಗಳು. ಅಷ್ಟಮಿ, ಚೌತಿ, ತುಳಸಿ ಪೂಜೆಗಳಂತಹ ಹಬ್ಬಗಳ ಆಚರಣೆಯೂ ಸರಳ.

ಶಾಮರಾಯನ ಅಂದಿನ ಬಡತನದ ಬಾಳಿನ ಮಧ್ಯೆ ಮಾಧುರ್ಯ, ಉಲ್ಲಾಸಗಳನ್ನು ಬೆರಸಿದ ದಿನಗಳು ಇವು.

ಸಮೀಪದ ನಗರ ಕಾರ್ಕಳದಲ್ಲಿ ತನ್ನ ಕಲಾಪ್ರತಿಭೆಗೆ ಸಾಕಷ್ಟು ಪ್ರೋತ್ಸಾಹ ಲಭಿಸಬಹುದೆಂಬ ನಿರೀಕ್ಷೆಯಿಂದ ಜೋಗಪ್ಪಾಚಾರ್ಯರ ಸಂಸಾರ ನಕ್ರೆಯನ್ನು ಬಿಟ್ಟು ಕಾರ್ಕಳದ ಹವಲ್ದಾರ್ ಬೆಟ್ಟಿನಲ್ಲಿ ನೆಲಸಿತು.

ಜೋಗಪ್ಪಾಚಾರ್ಯರು ಶಿಲ್ಪ ವಿದ್ಯಾ ಪರಿಣತರು, ಆದರೆ ಆ ಕಾಲದಲ್ಲಿ ಅವರ ಕಲೆಯನ್ನು ಪ್ರೋತ್ಸಾಹಿಸುವವರು ಯಾರು? ಅಪರೂಪದಲ್ಲಿ ಶ್ರೀಮಂತರ ಮನೆಯಿಂದ ನಕಾಸೆಯ ಬಾಗಿಲಿನ ರಚನೆಗೆ ಕರೆ ಬರುತ್ತದೆ. ಒಂದೆರೆಡು ತಿಂಗಳಲ್ಲಿ ಆ ಶಿಲ್ಪಕಾರ್ಯ ಮುಕ್ತಾಯಗೊಳ್ಳುತ್ತದೆ. ಮತ್ತೆ ಶಿಲ್ಪಕಾರ್ಯದ ಕರೆಗಾಗಿ ನಿರೀಕ್ಷೆ. ಅರೆಯೂಟ, ಉಪವಾಸ ಸಾಮಾನ್ಯ. ಬಹುಶಃ ಹೊಟ್ಟೆ ತುಂಬ ಉಂಡ ದಿನವೇ ಹಬ್ಬ! ಎಲ್ಲಿಂದಲೋ ರಥದ ರಿಪೇರಿಗೆ ಕರೆ ಬರುತ್ತದೆ. ಎರಡುಮೂರು ತಿಂಗಳು ಅಷ್ಟಿಷ್ಟು ಊಟೋಪಚಾರ. ಹೀಗೆ ಜೋಗಪ್ಪಾಚಾರ್ಯರ ಬದುಕು - ಸಾಧನೆ ಸಾಗಿದ್ದರಿಂದಲೇ ಒಂದೂರಿನಿಂದ ಇನ್ನೊಂದೂರಿಗೆ ವಲಸೆ ಹೋಗಬೇಕಾದ ಸಂದರ್ಭ.

ಕಾಬೆಟ್ಟು ಶಾಲೆಯಲ್ಲಿ ಶಾಮರಾಯನ ಮೂರು, ನಾಲ್ಕನೆಯ ತರಗತಿಯ ಓದು ಸಾಗಿ, ಕಾರ್ಕಳದ ವೆಂಕಟರಮಣ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಮರಾಯನ ಅಧ್ಯಯನ ಮುಂದುವರಿಯಿತು. ಗಣಿತ, ಕನ್ನಡ ಪಾಠಗಳಲ್ಲಿ ಶಾಮರಾಯನಿಗೆ ವಿಶೇಷ ಆಸಕ್ತಿ. ಕನ್ನಡದಲ್ಲಿ ಎಪ್ಪತ್ತು, ಎಂಬತ್ತು ಅಂಕಗಳು ಬಂದರೆ, ಗಣಿತದಲ್ಲಿ ಅಂಕಗಳು ನಲ್ವತ್ತರ ಗಡಿಯನ್ನು ದಾಟಿದ್ದೇ ಇಲ್ಲ! ಜೊತೆಗೆ, ಹೊಸತಾಗಿ ಸಂಸ್ಕೃತ ಕಲಿಕೆಯ ಅವಕಾಶ ಬಂದಿತು. ಅಲ್ಲಿ ಸಂಸ್ಕೃತ ಪಾಠ ಕಡ್ಡಾಯ. ಸಂಸ್ಕೃತವನ್ನು ಶ್ರದ್ಧೆಯಿಂದ ಅಧ್ಯಯನಿಸಿದ ಶಾಮರಾಯ.

ಹಿರಿಯ ಪ್ರಾಥಮಿಕ ಶಾಲೆಯ ಅಧ್ಯಯನದುದ್ದಕ್ಕೂ ಶಾಮರಾಯನ ತಲೆಯನ್ನು ಟೋಪಿ ಅಲಂಕರಿಸಿದ್ದರೆ, ಟೋಪಿಯ ಒಳಗೆ ಶಾಮರಾಯನ ಜುಟ್ಟು ಅವಿತಿರುತ್ತಿತ್ತು. ಎಷ್ಟೋ ಬಾರಿ ಹಿಂದಿನ ಸಾಲಿನ ಮಕ್ಕಳು ಶಾಮರಾಯನ ಟೋಪಿಯನ್ನು ಮೇಲಕ್ಕೆತ್ತಿ ಜುಟ್ಟನ್ನು ಹೊರಗೆಳೆದು ಗೇಲಿ ಮಾಡುತ್ತಿದ್ದರು. ಶಾಮರಾಯ ಎಂದೂ ಸಿಟ್ಟುಗೊಳ್ಳುತ್ತಿರಲಿಲ್ಲ. ಶಾಮರಾಯನದು ಬರೀ ನಗು ಅಷ್ಟೆ! ಈ ಸಂಯಮ ಶಾಮರಾಯನಿಗೆ ಬದುಕು ಕಲಿಸಿದ ಪಾಠ.

ಒಮ್ಮೆ ಒಬ್ಬರು ಶಿಸ್ತಿನ ಅಧ್ಯಾಪಕರ ಇಂಗ್ಲಿಷ್ ಪಾಠದ ಮಧ್ಯೆ ತರಗತಿಯ ಹಿಂದಿದ್ದ ಖಾಲಿ ಡಬ್ಬದ ಸಾಲುಗಳೆಲ್ಲ ಉರುಳಿ ಭೂಕಂಪವಾದಂತೆ ಸದ್ದು ಹೊರಡಿಸಿತು.

ಮಕ್ಕಳೆಲ್ಲ 'ಗೋ' ಎಂದು ನಕ್ಕರು. ಡಬ್ಬದ ಅಡಿಗೆ ಹಗ್ಗವನ್ನು ಕಟ್ಟಿದ್ದ ತರಗತಿಯ ಮಕ್ಕಳು ಹಗ್ಗವನ್ನು ಎಳೆದು, ಡಬ್ಬಗಳನ್ನು ಬೀಳಿಸಿ ಮಜಾ ಉಡಾಯಿಸಿದ್ದರು. ಸಿಟ್ಟಿನಿಂದ ಉರಿದ ಅಧ್ಯಾಪಕರು ವಿಚಾರಣೆ ನಡೆಸಿದಾಗ ಅಪರಾಧಿಗಳು ಸಿಕ್ಕಿ ಬೀಳಲಿಲ್ಲ. ಎಲ್ಲರೊಂದಿಗೆ ನಕ್ಕಿದ್ದ ಶಾಮರಾಯ ಪಕ್ಕದ ಗೆಳೆಯನೊಂದಿಗೆ ಪೆಟ್ಟನ್ನು ತಿಂದ ! ತಾನು ನಕ್ಕ ತಪ್ಪನ್ನು ಒಪ್ಪಿಕೊಂಡ ಸಮಾಧಾನ ಶಾಮರಾಯನಿಗಿತ್ತು.

ಹಿರಿಯ ಪ್ರಾಥಮಿಕ ಶಾಲೆಯ ಕೊನೆಯ ಸರಕಾರಿ ಪರೀಕ್ಷೆಗೆ ಶಾಮರಾಯ ಕುಳಿತುಕೊಳ್ಳುವದಾಗಲಿಲ್ಲ. ಕಾರಣ, ಶಾಮರಾಯನ ತೀರ್ಥರೂಪರು ಪರೀಕ್ಷೆಯ ಫೀಸು ಒಂದೂಕಾಲು ರೂಪಾಯಿಯನ್ನು ಕಟ್ಟಿರಲಿಲ್ಲ. ಅಷ್ಟು ಬಡತನ.

'ಆದದ್ದೆಲ್ಲ ಒಳಿತೇ ಆಯಿತು' ಎಂದು ತನ್ನನ್ನು ತಾನು ಸಂತೈಸಿಕೊಂಡು ಶ್ರೀ ಭುವನೇಂದ್ರ ಸಂಸ್ಕೃತ ವಿದ್ಯಾಪೀಠದಲ್ಲಿ ತನ್ನ ಮೆಚ್ಚಿನ ಸಂಸ್ಕೃತ ಅಧ್ಯಯನವನ್ನು ಮುಂದುವರಿಸಿದ ಶಾಮರಾಯ. ಪ್ರಥಮ, ದ್ವಿತೀಯ ಅಡ್ವಾನ್ಸ್ ಪರೀಕ್ಷೆಯನ್ನು ಉತ್ತಮ ಅಂಕಗಳೊಂದಿಗೆ ಪೂರೈಸಿದ.

ಶಾಮರಾಯನ ಪಾಲಿಗೆ ಕುಮಾರ ಸಂಭವ, ದಶಕುಮಾರ ಚರಿತೆ, ಕಿರಾತಾರ್ಜುನೀಯ, ಲಘುಸಿದ್ಧಾಂತ ಕೌಮುದಿಗಳ ಮೂಲಕ ಸಂಸ್ಕೃತ ಸಾಹಿತ್ಯದ ಸವಿಯನ್ನು ಮೆಲ್ಲುವ ಭಾಗ್ಯ.

ಇದೇ ಕಾಲದಲ್ಲಿ ಶಾಮರಾಯನ ಅಜ್ಜ, ಅಜ್ಜಿ ತೀರಿಕೊಂಡರು. ಆ ಕಾಲದಲ್ಲಿ ಅಕ್ಕಿಮುಡಿಯೊಂದರ ಬೆಲೆ ಹತ್ತು ರೂಪಾಯಿಗಳು. ತೆಂಗಿನ ಕಾಯಿಯೊಂದಕ್ಕೆ ನಾಲ್ಕು ಆಣೆಗಳು. ಚಿನ್ನದ ಪವನಿಗೆ ಹದಿಮೂರು ರೂಪಾಯಿಗಳು. ದುಡಿಮೆಗಾರನ ದಿನಗೂಲಿ ಎರಡೂವರೆ ಆಣೆಗಳು. ಇವು ಅಂದಿನ ಧಾರಣೆಗಳ ಸ್ಥಿತಿಗತಿ.

ಅಂದಿನ ಬದುಕು ಎಂದರೆ ಕಷ್ಟಕಾರ್ಪಣ್ಯಗಳ ದಿನಗಳು. ಶನಿವಾರ ಅಪರಾಹ್ನ, ಆದಿತ್ಯವಾರ ಶಾಮರಾಯ ತೀರ್ಥರೂಪರ ಮರದ ಕೆಲಸದಲ್ಲಿ ಸಹಕರಿಸುತ್ತಿದ್ದ. ಒಂದಿಷ್ಟಾದರೂ ಹೆಚ್ಚು ದಿನಗೂಲಿ ಸಿಗಬಹುದೆಂಬ ನಿರೀಕ್ಷೆ ಜೋಗಪ್ಪಾಚಾರ್ಯರದು.

ಬೆಳೆಯುತ್ತಿದ್ದ ಕಾರ್ಕಳ ಪಟ್ಟಣದಲ್ಲಿ ಜೋಗಪ್ಪಾಚಾರ್ಯರ ಸಂಸಾರದ ಬದುಕು ತೀರಾ ಬಡತನ, ಶ್ರೀಮಂತಿಕೆಯ ನಡುದಾರಿಯದು. ಆಗಾಗ, ನಕಾಸೆ, ಕೆತ್ತನೆ ಕೆಲಸಕ್ಕಾಗಿ ಜೋಗಪ್ಪಾಚಾರ್ಯರಿಗೆ ಕರೆ ಬರುತ್ತಿತ್ತು.

# ಸಾಧನೆ

ಈಗೀಗ, ರಜಾದಿನಗಳು ಬಂತೆಂದರೆ ಶಾಮರಾಯನಿಗೆ ಒಂದು ತರಹದ ಖುಶಿ. ಕಾರಣ, ತೀರ್ಥರೂಪರ ಶಿಲ್ಪಕಾರ್ಯದಲ್ಲಿ ನೆರವಾಗುವ ಸುಯೋಗ.

ಚಕಚಕನೆ ಮರವನ್ನು ಕೆತ್ತಿ ಸುಸ್ವರೂಪವನ್ನು ನೀಡುವ ತೀರ್ಥರೂಪರ ಶಿಲ್ಪಕಾರ್ಯವನ್ನು ತದೇಕ ದೃಷ್ಟಿಯಿಂದ ಶಾಮರಾಯ ದಿಟ್ಟಿಸುತ್ತಿದ್ದ. ಅಲ್ಲಿಯ ಹೂಬಳ್ಳಿ, ಬೊಂಬೆಗಳ ಸೌಂದರ್ಯವನ್ನು ಮೆಲ್ಲುತ್ತ ಪುಳಕಗೊಳ್ಳುತ್ತಿದ್ದ ಶಾಮರಾಯ. ತಾನು ತೀರ್ಥರೂಪರಂತೆ ಶಿಲ್ಪ ಚಾತುರ್ಯವನ್ನು ತೋರುವ ದಿನಗಳು ಎಂದು ಬಂದಾವು? ಎಂಬುದೇ ಶಾಮರಾಯನ ಚಿಂತನೆ.

ಶಾಲೆ ಬಿಟ್ಟಿದ್ದ ಶಾಮರಾಯನ ಅಣ್ಣ ಕೃಷ್ಣಯ್ಯ ಮರದ ಪೀಠೋಪಕರಣ ತಯಾರಿ, ಲಾರಿ ಬಾಡಿ ನಿರ್ಮಾಣ ಕಾರ್ಯದಲ್ಲಿ ತೊಡಗಿ ಸ್ವತಂತ್ರ ಬದುಕನ್ನು ಸಾಗಿಸಿದ್ದ.

ಶಾಲಾ ದಿನಗಳಲ್ಲಿ ಶಾಮರಾಯನಿಗೆ ಮತ್ತೊಂದು ಸುಯೋಗ. ಶಾಲೆಯಿಂದ ಮನೆಗೆ ಹಿಂತಿರುಗುತ್ತಿದ್ದ ವೆಂಕಟರಮಣ ದೇವಸ್ಥಾನ ಬೀದಿಯ ಒಂದು ಕಟ್ಟಡದ ಕೊಠಡಿಯಲ್ಲಿ ಶಿಲ್ಪಕಾರ್ಯ ನಡೆಯುತ್ತಿರುವ ದೃಶ್ಯ ಶಾಮರಾಯನ ದೃಷ್ಟಿಗೆ ಬಿತ್ತು. ಹಸಿದವನಿಗೆ ತಿಂಡಿಗೋಚರಿಸಿದ ಮಧುರ ಅನುಭವವಾದಂತಾಯಿತು. ಅಂದಿನಿಂದ, ದಿನವೂ ಶಾಲೆಯಿಂದ ಮರಳುತ್ತಿದ್ದಂತೆ, ಶಾಮರಾಯನ ಹೆಜ್ಜೆಗಳಿಗೆ ತುಂಬು ಉತ್ಸಾಹ. ಶಿಲ್ಪಕಾರ್ಯವನ್ನು ಕಾಣುವ ತವಕ.

ಅಡ್ಡಪಂಚೆ, ಬಟ್ಟೆ ಹೊದ್ದ ಮೈಯ ಹಿರಿಯರೊಬ್ಬರ ಆದೇಶದಂತೆ ಶಿಲ್ಪಿಗಳು ಕರಿಶಿಲೆಯ ನಾಲ್ಕು ಕಂಬಗಳಲ್ಲಿ ಹೂ, ಬಳ್ಳಿಗಳನ್ನು ಕೆತ್ತುವ ಕಾರ್ಯ ಅಲ್ಲಿ ನಡೆದಿತ್ತು. ಅಲ್ಲಿಯ ಶಿಲ್ಪ ಕಾರ್ಯವನ್ನು ಕಂಡಾಗಲೆಲ್ಲ ಶಾಮರಾಯನ ಕೈ ಬೆರಳುಗಳಲ್ಲಿ ಅದೆಂತಹದೋ ಶಕ್ತಿ ಸಂಚಾರವಾದಂತಹ ಅನುಭವ. ತಾನೂ ಕೆತ್ತಬೇಕಲ್ಲ, ಶಿಲೆಯಲ್ಲಿ ಕಲೆಯನ್ನು ಅರಳಿಸಬೇಕಲ್ಲ – ಹೀಗೆ ಹರಿಯುತ್ತಿತ್ತು ಶಾಮರಾಯನ ಯೋಚನಾಲಹರಿ.

ಶಿಲ್ಪದಲ್ಲಿ ವಿಶೇಷ ಆಸಕ್ತಿಯನ್ನು ತೋರುತ್ತಿದ್ದ ಶಾಮರಾಯನ ಮೇಲೆ ಜೋಗಪ್ಪಾಚಾರ್ಯರಿಗೆ ವಿಶೇಷ ಮಮತೆ ಉಕ್ಕಿತೆಂದೇ ಅನ್ನಬೇಕು. ತನ್ನಂತೆಯೇ ಮಗನೂ ಶಿಲ್ಪಿಯಾಗಿ, ತನಗಿಂತಲೂ ಖ್ಯಾತನಾಗುವ ಅಸ್ಪಷ್ಟ ಚಿತ್ರ ಜೋಗಪ್ಪಾಚಾರ್ಯರ ಮನಸ್ಸಿನಲ್ಲಿ ಆಗಾಗ ಮೂಡುತ್ತಿತ್ತು. ಜೋಗಪ್ಪಾಚಾರ್ಯರು ಅಧ್ಯಯನ ಮುಗಿಸಿದ್ದ ಶಾಮರಾಯನ ಶಿಲ್ಪ ಕಾರ್ಯವನ್ನು ತಿದ್ದಿ ತೀಡುತ್ತ ಮುನ್ನಡೆಸಿದರು.

ಜೋಗಪ್ಪಾಚಾರ್ಯರು ಮಾತುಗಾರರಲ್ಲ. ಅವರಿಗೆ ಶಿಲ್ಪ ಪಾಠದ ರೀತಿ ತಿಳಿಯದು. ಅಪರೂಪದಲ್ಲಿ ಒಮ್ಮೊಮ್ಮೆ 'ಇದು ಹೀಗಾಗಬೇಕು' ಎಂದು ಶಾಮರಾಯನಿಗೆ ತೀರ್ಥರೂಪರು ಸಲಹೆ ನೀಡುತ್ತಿದ್ದರು. ತೀರ್ಥರೂಪರ ಶಿಲ್ಪರಚನಾ ವಿಧಾನವನ್ನು ಕಾಣುತ್ತ ಶಾಮರಾಯ ಕಲಿತುದೇ ಹೆಚ್ಚು.

ತೀರ್ಥರೂಪರ ನಿರ್ದೇಶನದಲ್ಲಿ ಶಾಮರಾಯ ಹೂ, ಬಳ್ಳಿ, ಬೊಂಬೆಗಳ ರಚನೆಯಲ್ಲಿ ಪ್ರೌಢತೆಯನ್ನು ಸಿದ್ಧಿಸುತ್ತ ನಡೆದ.

ಕಾರ್ಕಳದ ವೆಂಟಕರಮಣ ದೇವಾಲಯದ ಗರ್ಭಗುಡಿಯ ಜೀರ್ಣೋದ್ಧಾರ ಕಾರ್ಯ ಪ್ರಾರಂಭಗೊಂಡಿತು. ಇದೇ ಸಂದರ್ಭದಲ್ಲಿ ದೇವಾಲಯದ ಮರದ ಬೊಂಬೆಗಳ ರಿಪೇರಿಯನ್ನು ಶ್ರದ್ಧೆಯಿಂದ ನಿರ್ವಹಿಸಿದ ಶಾಮರಾಯ.

ವೆಂಕಟರಮಣ ದೇವಾಲಯದಲ್ಲಿ ನಾಲ್ಕು ಶಿಲಾಸ್ತಂಭಗಳು ಇದೇ ಕಾಲದಲ್ಲಿ ಎದ್ದು ನಿಂತವು. ಶಾಮರಾಯ ಶಾಲೆಯಿಂದ ಹಿಂತಿರುಗುವಾಗಲೆಲ್ಲ ದೂರದಿಂದ ಕಂಡ ಶಿಲಾಸ್ತಂಭಗಳೇ ಅವು. ತಳತಳನೆ ಹೊಳೆಯುವ ಕಪ್ಪು ಶಿಲೆಯ ನುಣುಪಾದ ಮೈ, ಹೂ-ಬಳ್ಳಿ, ಹಕ್ಕಿಗಳು, ದ್ರಾಕ್ಷಿ ಬಳ್ಳಿ, ಜೇನ್ನೊಣ, ದ್ರಾಕ್ಷಿ ಗೊಂಚಲು ಇವೆಲ್ಲದರ ಸೌಂದರ್ಯವನ್ನು ಮೆಲುಕು ಹಾಕುತ್ತ, ತನ್ನನ್ನು ತಾನು ಮರೆತು ಬಿಡುತ್ತಿದ್ದ ಶಾಮರಾಯ.

ಸುಪ್ರಸಿದ್ಧ ಶಿಲ್ಪಿ ರಂಜಾಳ ಗೋಪಾಲ ಶೆಣೈಯವರ ನಿರ್ದೇಶನದಂತೆ ರಂಜಾಳ ಅನಂತಾಚಾರ್ಯ, ಹವಲ್ದಾರ ಬೆಟ್ಟು ವಾಸುದೇವ ಆಚಾರ್ಯ, ಪಳ್ಳಿ ಚಿನ್ನಯ್ಯಾಚಾರ್ಯರು ಆ ನಾಲ್ಕು ಶಿಲಾಸ್ತಂಭಗಳಲ್ಲಿ ತಮ್ಮ ಕಲಾಚಾತುರ್ಯವನ್ನು ಮೆರೆದವರು ಎಂಬುದನ್ನು ಬಹಳ ದಿನಗಳ ನಂತರ ಅರಿತುಕೊಂಡ ಶಾಮರಾಯ.

ಸಂಸ್ಕೃತ ದ್ವಿತೀಯ ಅಡ್ವಾನ್ಸ್‌ನ್ನು ಪೂರೈಸಿದ ಶಾಮರಾಯನಿಗೆ ಮುಂದೆ ಓದುವ ಹಂಬಲಕ್ಕಿಂತ ಶಿಲ್ಪದಲ್ಲೇ ಮನಸ್ಸು ನೆಟ್ಟಿತ್ತು. ಶಿಲ್ಪದಲ್ಲೇ ತನ್ನ ಬದುಕು ಸವೆಯಬೇಕು. ಶಿಲ್ಪದಲ್ಲಿ ಮಹತ್ತಾದ ಸಾಧನೆಯನ್ನು ಮಾಡಬೇಕು ಎಂಬುದು ನಕ್ರೆಯಲ್ಲಿ ಬ್ರಹ್ಮೋಪದೇಶವನ್ನು ಪಡೆದಿದ್ದ ಶಾಮರಾಯನ ನಿತ್ಯ ಗಾಯತ್ರಿಯೊಂದಿಗಿನ ದಿವ್ಯಮಂತ್ರವಾಯಿತು.

ಶಿಲ್ಪದ ದಾರಿ ಅದು ಕಲ್ಲುಮುಳ್ಳಿನ ಹಾದಿ, ದಾರಿದ್ರ್ಯ ತಪ್ಪುವದೆಂದೇ ಇಲ್ಲ. ಶಾಮರಾಯನದೂ ಇದೇ ಕಷ್ಟದ ದಾರಿ ಆಗಬೇಕೇ? ಎಂದು ಜೋಗಪ್ಪಾಚಾರ್ಯರಿಗೆ ಒಮ್ಮೊಮ್ಮೆ ಚಿಂತೆ ಕಾಡುವದಿತ್ತು. ಶಿಲ್ಪ ವಿಶ್ವಬ್ರಾಹ್ಮಣ ಧರ್ಮ, ತಮ್ಮ ಪಾಲಿನ

ಧರ್ಮ, ಶಿಲ್ಪ ಸೃಷ್ಟಿಯಿಂದಲೇ ಧರ್ಮದ ಉಳಿವು. ಭಕ್ತರನ್ನು ದೇವರ ಕಡೆಗೆ ಕೊಂಡೊಯ್ಯುವ ಸಾಧನ ಶಿಲ್ಪ. ಶಿಲ್ಪ ನೀಡುವ ಆನಂದವೇ ಪರಮ ಆನಂದ. ಒದು ಅನುಭವಗಳಿಂದ ಈ ತೆರನಾದ ಚಿಂತನಕ್ಕೊಳಗಾದ ಜೋಗಪ್ಪಾಚಾರ್ಯರು, ಶಾಮರಾಯನಿಗೆ ತಮ್ಮೆಲ್ಲ ವಿದ್ಯೆಯನ್ನು ಧಾರೆ ಎರೆಯುವ ದೃಢ ಸಂಕಲ್ಪವನ್ನು ತಾಳಿದರು.

ಬಾಗಿಲುಗಳಲ್ಲಿ ಹೂ-ಬಳ್ಳಿಗಳ ಅಲಂಕಾರ, ರಥದ ಹೂ-ಬಳ್ಳಿ, ಬೊಂಬೆಗಳ ರಿಪೇರಿ, ರಚನೆ - ಹೀಗೆ ತೀರ್ಥರೂಪರೊಂದಿಗೆ ಒಂದು ವರ್ಷ ಶಿಲ್ಪ ಕಾರ್ಯದಲ್ಲಿ ಸಹಕರಿಸುತ್ತಿದ್ದಂತೆಯೇ, ತಾನೇ ಸ್ವತಂತ್ರವಾಗಿ ರಥ, ನಕಾಸೆಯ ಬಾಗಿಲುಗಳನ್ನು ರಚಿಸುವ ಭಾಗ್ಯ ಶಾಮರಾಯನಿಗೆ ಒಲಿದು ಬಂದಿತು.

ಗೋಕರ್ಣನಾಥ ದೇವಾಲಯದ ರಥ, ಶಿಲಾದ್ವಾರ, ಮರದ ನಕಾಸೆಯ ಬಾಗಿಲು, ಉಚ್ಚಿಲ ಮಹಾಲಕ್ಷ್ಮಿ ದೇವಾಲಯದ ರಥ, ಗೊಂಬೆಗಳು, ಶರವು ಗಣಪತಿ ದೇವಾಲಯದ ಪಕ್ಕದ ಶಿವದೇವಾಲಯದ ಮಹಾದ್ವಾರ - ಇವು ಈ ಕಾಲದಲ್ಲಿ ಶಾಮರಾಯನಿಂದ ರಚಿತವಾದ ಕೃತಿಗಳಲ್ಲಿ ಮುಖ್ಯವಾದವು.

ಮಿಯಾರ್ ವಾಮನ ನಾಯಕರು ಕಲಾಪ್ರೇಮಿಗಳು, ಕಲಾಪ್ರೋತ್ಸಾಹಕರು. ಜೋಗಪ್ಪಾಚಾರ್ಯರಿಂದ ಐದಡಿ ಎತ್ತರದ ಮಂಟಪವನ್ನು ಬಯಸಿದರು. ಜೋಗಪ್ಪಾಚಾರ್ಯರು, ಶಾಮರಾಯರ ಸತತ ಶ್ರಮದಿಂದ ಹೂ-ಬಳ್ಳಿಗಳಿಂದ ಅಲಂಕೃತ ಮಂಟಪ ಸರ್ವಾಂಗ ಸುಂದರವಾಗಿ ನಿರ್ಮಾಣಗೊಂಡಿತು.

ಈ ಮಂಟಪದ ಕುಸುರಿ ಕೆಲಸಗಳು ವಾಮನ ನಾಯಕರಿಗೆ ಬಹು ಮೆಚ್ಚಿಗೆಯಾಗಿ, ಮುಂದೆ ಈ ಮಂಟಪಕ್ಕೆ ಚಿನ್ನವನ್ನು ಹೊದಿಸಿದರು.

ಶಿಲ್ಪ ಸೃಷ್ಟಿಯಲ್ಲಿ ಪ್ರಬುದ್ಧತೆಯನ್ನು ಸಾಧಿಸುತ್ತ ಬಂದಂತೆ ಶಾಮರಾಯ ಯೌವನದ ಹಂತಕ್ಕೆ ಕಾಲಿಟ್ಟ.

ಶಿಲಾಶಿಲ್ಪ ಸಾಧನೆಗಾಗಿ ಶಾಮರಾಯಾಚಾರ್ಯರ ಅಂತರಂಗ ಒಂದೇ ಸಮನೆ ಚಿಂತಿತವಾಯಿತು. ಪದೇ ಪದೇ ವೆಂಕಟರಮಣ ದೇವಾಲಯದ ಶಿಲಾಸ್ತಂಭಗಳು, ಅವುಗಳ ಸೂಕ್ಷ್ಮ ಕೆತ್ತನೆ ಶಾಮರಾಯಾಚಾರ್ಯರ ನಿದ್ದೆಯನ್ನು ಕೆಡಿಸಿದವು.



ಪದ್ಮಾವತಿ

## ಪ್ರತಿಭೆಯ ವಿಕಾಸ

ಅದೇ ವರ್ಷ ರಂಜಾಳ ಗೋಪಾಲ ಶೆಣ್ಯೆಯವರಿಗೆ ಒಬ್ಬ ಸಹಾಯಕ ಶಿಲ್ಪಿಯ ಅವಶ್ಯಕತೆಯು ಕಂಡುಬಂದಿತು. ಶಿಲ್ಪ ಸೃಷ್ಟಿಯೆಂದರೆ ಅದು ದೇವರ ಪೂಜೆ ಎಂಬಷ್ಟು ಶಿಲ್ಪದಲ್ಲಿ ತಾದಾತ್ಮ್ಯ ಹೊಂದುತ್ತಿದ್ದ ರಂಜಾಳ ಗೋಪಾಲ ಶೆಣ್ಯೆಯವರು ಬಯಸಿದ ಸಹಾಯಕ ಶಿಲ್ಪಿಯಲ್ಲಿ ಅಂತಹುದೇ ಶ್ರದ್ಧೆ, ಸಾಧನೆಯ ಹುಮ್ಮಸ್ಸನ್ನು ನಿರೀಕ್ಷಿಸಿದ್ದರು. ಈ ದಿನಗಳಲ್ಲಿ ಗೋಪಾಲ ಶೆಣ್ಯೆಯವರ ಮನಸ್ಸಿನೊಳಗೆ ಸುಳಿದವರು ಶಾಮರಾಯಾಚಾರ್ಯರು. ಗೋಪಾಲ ಶೆಣ್ಯೆಯವರು ಶಾಮರಾಯಾಚಾರ್ಯರನ್ನು ತಮ್ಮಲ್ಲಿಗೆ ಕರೆಸಿಕೊಂಡರು. ತಮ್ಮ ಇಚ್ಛೆಯನ್ನು ಶಾಮರಾಯಾಚಾರ್ಯರ ಮುಂದಿಟ್ಟರು. ತೀರ್ಥರೂಪರಿಂದ ದಾರುಶಿಲ್ಪ, ಶಿಲಾಶಿಲ್ಪದ ರಹಸ್ಯವನ್ನೆಲ್ಲ ಅರಿತುಕೊಂಡಿದ್ದು, ಶಿಲಾಶಿಲ್ಪ ರಚನೆಯಲ್ಲಿ ವಿಶೇಷ ಸಾಧನೆಯನ್ನು ಮಾಡಬೇಕೆಂಬ ಹಂಬಲವಿದ್ದ ಶಾಮರಾಯಾಚಾರ್ಯರು 'ಇದು ದೇವರೇ ನನ್ನ ಪ್ರಾರ್ಥನೆಗೆ ನೀಡಿದ ವರ' ಎಂದು ವಿಶೇಷ ಆನಂದವನ್ನು ಅನುಭವಿಸಿದರು. ಕೈತುಂಬ ಶಿಲ್ಪಕಾರ್ಯ, ಮರ, ಶಿಲೆ, ಲೋಹಗಳಲ್ಲೆಲ್ಲ ಶಿಲ್ಪಸಾಧನೆಗೆ ಅವಕಾಶ. ಈ ಭಾಗ್ಯ ಬಂದುದಕ್ಕಾಗಿ ವಿಶ್ವಕರ್ಮ, ಕಾಳಿಕಾಂಬೆಯರನ್ನು ಮನಸಾ ವಂದಿಸಿದರು.

ರಂಜಾಳ ಗೋಪಾಲ ಶೆಣ್ಯೆಯವರು ನಿಜವಾದ ಅರ್ಥದಲ್ಲಿ ಕಲಾ ಯೋಗಿಗಳು. ಶಿಲ್ಪ ಕಲೆಯಲ್ಲಿಯ ಅವರ ಶ್ರದ್ಧೆ, ಶಿಲ್ಪ ಸೃಷ್ಟಿಯ ಕಾಲದ ತನ್ಮಯತೆ - ಇವೆಲ್ಲವೂ ವಿಶೇಷ ತರದ್ದು. ಒಂದು ಗೋಣಿಯ ತುಣುಕನ್ನು ಹಾಸಿ, ಕುಳಿತು ಶಿಲ್ಪ ಕಾರ್ಯದಲ್ಲಿ ಮಗ್ನರಾದರೆಂದರೆ ಗೋಪಾಲ ಶೆಣ್ಯೆಯವರಿಗೆ ಮಧ್ಯೆ ಬಿಡುವು ಎಂಬುದಿಲ್ಲ. ಯಾವುದೋ ಹೊತ್ತಿಗೆ ಈಚೆಗೆ ಎದ್ದು ಬರುವ ಗೋಪಾಲ ಶೆಣ್ಯೆಯವರು ಇತರರನ್ನು ಗಮನಿಸುತ್ತಾರೆ.

ದೇವರಪೂಜೆ, ಭಕ್ತಿ, ದೇವರ ಬಗೆಗಿನ ಚಿಂತನ, ಸರಳ ಉಡುಗೆ ತೊಡುಗೆಯ ಗೋಪಾಲ ಶೆಣ್ಯೆಯವರು ಸಾಂಪ್ರದಾಯಿಕ ಶಿಲ್ಪಿಗಳಿಗೊಂದು ಉನ್ನತ ಮಾದರಿ.

ಊಟದ ನಂತರ ಮರದ ತುಂಡನ್ನು ತಲೆದಿಂಬಿನಂತೆ ಇರಿಸಿಕೊಂಡು ಒಂದರ್ಧಗಂಟೆ ವಿಶ್ರಾಂತಿ ಪಡೆದು ಎದ್ದು ಬಿಡುವವರು ರಂಜಾಳ ಗೋಪಾಲ ಶೆಣ್ಯೆಯವರು. 'ದೇಹಕ್ಕೆ ಸುಖ ನೀಡಬಾರದು' ಇದು ಗೋಪಾಲ ಶೆಣ್ಯೆಯವರ ಚಿಂತನ.

ಗೋಪಾಲ ಶೆಣ್ಯೆಯವರ ಆಚಾರ, ವಿಚಾರಗಳಿಂದ ಶಾಮರಾಯಾಚಾರ್ಯರು ಗಳಿಸಿಕೊಂಡ ಅನುಭವ ಅಪಾರ.

ತೀರ್ಥರೂಪರಿಂದ ಪಡೆದ ಶಿಲ್ಪಾನುಭವವನ್ನು ರಂಜಾಳ ಗೋಪಾಲ ಶೆಣ್ಯೆಯವರಲ್ಲಿಯ ಕಲಾಸೃಷ್ಟಿಯಲ್ಲಿ ಎರಕ ಹೊಯ್ಯುತ್ತ, ಸುದೀರ್ಘ ಇಪ್ಪತ್ತೊಂದು ವರ್ಷಗಳಲ್ಲಿ ಮರ, ಶಿಲೆ, ಎರಕ, ಲೋಹ ಶಿಲ್ಪಗಳಲ್ಲಿ ತಮ್ಮ ಕನಸನ್ನೆಲ್ಲ ನನಸನ್ನಾಗಿಸಿ ಕೊಂಡರು ಶಾಮರಾಯಾಚಾರ್ಯರು. ಈ ಅವಧಿಯಲ್ಲಿ ಶಾಮರಾಯಾಚಾರ್ಯರು ಸುಮಾರು ಐನೂರು ಪ್ರತಿಮೆಗಳಲ್ಲಿ ತಮ್ಮ ಚತುರತೆಯನ್ನು ತೋರಿದ್ದರು.

ಕಲಾವಿದ ಎಂದೆಂದೂ ಅತೃಪ್ತ. ಒಂದು ಕೃತಿಯ ನಂತರ, ಅದಕ್ಕಿಂತ ಭಿನ್ನವಾದ, ಉತ್ಕೃಷ್ಟ, ಪರಿಪೂರ್ಣ ಕೃತಿಯನ್ನು ಸೃಷ್ಟಿಸುವ ಬಯಕೆ. ಅಂತೆಯೇ ಮಹತ್ಸಾಧನೆಯ ಹಂಬಲ. ಶಾಮರಾಯಾಚಾರ್ಯರೂ ಇದಕ್ಕೆ ಹೊರತಲ್ಲ.

ತಮ್ಮ ಪ್ರತಿಭೆಯ ಪೂರ್ಣ ಸದ್ವಿನಿಯೋಗಕ್ಕೆ ತಾವೇ ಏಕೆ ದಾರಿ ಮಾಡಿಕೊಳ್ಳಬಾರದು? ಹೇಗೆ? ಸ್ವತಂತ್ರ ಶಿಲ್ಪಿಯಾಗಿ ಬದುಕು ಸಾಧ್ಯವೇ? ಎಂಬ ಪ್ರಶ್ನೆಗಳೊಂದಿಗೆ ಸಾಕಷ್ಟು ತಳಮಳಿಸಿದರು. ಸ್ವತಂತ್ರ ಶಿಲ್ಪಿಯಾಗಿ ಬಾಳುವಲ್ಲಿಯ ಸೋಲುಗೆಲುವಿನ ಕ್ಷಣಗಳ ಚಿಂತನೆಯಲ್ಲಿ ಬಹಳ ದಿನ ಕಳೆದು 'ಗದ್ದರೆ ಗೆಲುವು. ಸೋತರೆ ಸೋಲಲ್ಲ' ಎಂಬ ನಿಲುವಿಗೆ ಬಂದ ಶಾಮರಾಯಾಚಾರ್ಯರು ಸ್ವತಂತ್ರ ಶಿಲ್ಪಿಯಾಗಿ ಬದುಕುವ ನಿರ್ಧಾರವನ್ನು ಕೈಗೊಂಡರು.

ರಂಜಾಳ ಗೋಪಾಲ ಶೆಣ್ಯೆಯವರು ಮುಕ್ತ ಮನಸ್ಸಿನಿಂದ ಶಾಮರಾಯಾಚಾರ್ಯರಿಗೆ ಶುಭ ಸಂದೇಶವನ್ನು ನೀಡಿ ಯಶಸ್ಸನ್ನು ಹಾರೈಸಿದರು.

## ವಿಜಯ ಶಿಲ್ಪ ಕಲಾಕೇಂದ್ರ

ವಿಜಯದಶಮಿಯ ಪರ್ವದಿನ. ಕಾರ್ಕಳ ಪ್ರಧಾನ ಬೀದಿ ಸಾಲ್ಮರದಲ್ಲಿ ವಿಜಯ ಶಿಲ್ಪ ಕಲಾಕೇಂದ್ರವನ್ನು ಪ್ರಾರಂಭಿಸಿದರು. ಆ ಮೊದಲು ಶಾಮರಾಯಾಚಾರ್ಯರು ಕಾರ್ಕಳದ ಅತ್ತೂರು ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು. ಅತ್ತೂರು ವಿಷ್ಣುಮೂರ್ತಿ ದೇವಸ್ಥಾನದ ಟ್ರಸ್ಟಿಯವರು ದೇವಸ್ಥಾನಕ್ಕಾಗಿ ಆನೆಕಲ್ಲು ಇತ್ಯಾದಿ ಶಿಲ್ಪಗಳಿಗೆ ಆರ್ಡರ್ ನೀಡಿ ಶುಭವನ್ನು ಹಾರೈಸಿದ್ದರು. ಶಾಮರಾಯಾಚಾರ್ಯರು ತುಂಬು ಭರವಸೆಯಿಂದ ಶಿಲ್ಪಕರ್ಮಕ್ಕೆ ತೊಡಗಿದರು.

ಆ ಹೊತ್ತಿಗಾಗಲೇ ಶಾಮರಾಯಾಚಾರ್ಯರ ಶಿಲ್ಪಕಲಾ ಪ್ರತಿಭೆಯ ಪ್ರಚಾರವಾಗಿ ಸಾಕಷ್ಟು ಶಿಲ್ಪ ಪ್ರೇಮಿಗಳಿಗೆ ಪರಿಚಿತರಾಗಿದ್ದರು.

ಸ್ವತಂತ್ರ ಶಿಲ್ಪಿಯಾಗಿ ಶಿಲ್ಪ ಸಾಧಕರಾಗುವ ಶಾಮರಾಯಾಚಾರ್ಯರ ಸಾಹಸವನ್ನು

ಬಹಳಷ್ಟು ಶಿಲ್ಪ ಪ್ರೇಮಿಗಳು ಮೆಚ್ಚಿದರು. ತರುಣ ಶಿಲ್ಪಿ ಶಾಮರಾಮಾಚಾರ್ಯರಿಗೆ ಪ್ರೋತ್ಸಾಹದ ಹಸ್ತವನ್ನು ನೀಡಿದರು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಗಾರಾಧಕರ ಸಂಖ್ಯೆ ಹೆಚ್ಚು. ಪ್ರತೀ ಕುಟುಂಬದವರ ಒಂದೊಂದು ನಾಗಬನವಿರುತ್ತದೆ. ಇಲ್ಲಿ ನಾಗರ ಪಂಚಮಿ, ನಾಗಾರಾಧನೆಗಳು ವಿಶೇಷ ಹಬ್ಬ. ಆದ್ದರಿಂದಲೇ, ನಾಗಪ್ರತಿಮೆಯ ಬೇಡಿಕೆ ಇಲ್ಲಿ ಹೆಚ್ಚು. ಇದು ಶಾಮರಾಯಾಚಾರ್ಯರ ಅನುಭವವೂ ಕೂಡ.

ತಮ್ಮ ವಿಜಯ ಶಿಲ್ಪ ಕಲಾಕೇಂದ್ರದಲ್ಲಿ ನಾಗಪ್ರತಿಮೆಗಳನ್ನು ರಚಿಸುವತ್ತ ಶಾಮರಾಯಾಚಾರ್ಯರು ವಿಶೇಷ ಗಮನ ಹರಿಸಿದರು. ಒಂದು ಹೆಡೆ, ಐದು ಹೆಡೆಗಳ ಸುಂದರ, ವಿಭಿನ್ನ ಭಂಗಿ, ವಿನ್ಯಾಸದ ನಾಗಪ್ರತಿಮೆಗಳನ್ನು ರಚಿಸುತ್ತ ಸಾಗಿದರು. ಭಕ್ತಾದಿಗಳ ಆಯ್ಕೆಗೆ ವಿಪುಲ ಅವಕಾಶ.

ಸ್ವತಂತ್ರ ಶಿಲ್ಪಿಯಾಗಿ ಯಶಸ್ಸನ್ನು ಸಾಧಿಸುವ ಛಲವನ್ನಿರಿಸಿಕೊಂಡಿದ್ದ ಶಾಮರಾಯಾಚಾರ್ಯರು ಬಹುಶ್ರದ್ಧೆಯಿಂದ ಶಿಲ್ಪರಚನಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪ್ರತಿಯೊಂದು ಕೃತಿಯೂ ಮೊದಲು ಶಿಲ್ಪಿಯ ಅಂತರಂಗದಲ್ಲಿ ಮೂಡಿ, ಕೃತಿಗಿಳಿದು ಕೃತಿಯು ಶಿಲ್ಪಿಗೆ ಆತ್ಮತೃಪ್ತಿಯನ್ನು ನೀಡಬೇಕು. ಅಂದರೆ, ಭಕ್ತರ ಮನಸ್ಸಿನಲ್ಲೂ ಶಿಲ್ಪವು ಆನಂದವನ್ನು ತುಂಬಲು ಶಕ್ತವಾಗುತ್ತದೆ ಎಂಬುದು ಶಾಮರಾಯಾಚಾರ್ಯರ ಅನುಭವ ಸಿದ್ಧಾಂತ.

## ಶ್ರೀ ವಿಜಯ ಶಿಲ್ಪ ಶಾಲೆ

ಶಿಲ್ಪ ಪ್ರೇಮಿಗಳ ಪ್ರೋತ್ಸಾಹ ಹಿರಿದಾಯಿತು. ನಾಗಪ್ರತಿಮೆಗಳಲ್ಲದೆ ಭಕ್ತರು ದೇವಪ್ರತಿಮೆಗಳನ್ನು ಅಧಿಕಾಧಿಕವಾಗಿ ಬಯಸಿ ಬಂದರು. ವಿಜಯಶಿಲ್ಪ ಕಲಾಕೇಂದ್ರದ ಪ್ರದರ್ಶನದ ಕೊಠಡಿಯಲ್ಲಿ ನಾಗಪ್ರತಿಮೆಗಳೊಂದಿಗೆ, ದೇವಪ್ರತಿಮೆಗಳು ವಿಜೃಂಭಿಸಿತೊಡಗಿದವು. ದಿನದಿನವೂ ಶಿಲ್ಪ ಸೃಷ್ಟಿಯ ಕಾರ್ಯವು ಹೆಚ್ಚುತ್ತ ಸಾಗಿದಂತೆ ಸಾಲ್ಮರದ ವಿಜಯ ಶಿಲ್ಪ ಕಲಾಕೇಂದ್ರದ ಸ್ಥಳಾವಕಾಶ ಕಿರಿದೆನಿಸಿತು. ವಿಶಾಲ ಸ್ಥಳಾವಕಾಶದೆಡೆಗೆ ಶಾಮರಾಯಾಚಾರ್ಯರು ತಮ್ಮ ಲಕ್ಷ್ಯವನ್ನು ಹರಿಸಿದರು.

ಪೇಟೆಯ ಸರಹದ್ದಿನಲ್ಲಿ ವಿಶಾಲ ಸ್ಥಳಾವಕಾಶವನ್ನು ಹೊಂದುವುದು ದುಬಾರಿ ಅನ್ನಿಸಿದಾಗ, ತಮ್ಮ ಚೊಲ್ಪಾಡಿ ಮನೆಯ ವಠಾರದಲ್ಲೇ ವಿಜಯ ಶಿಲ್ಪ ಕಲಾಕೇಂದ್ರವನ್ನು ಮುಂದುವರಿಸುವ ತೀರ್ಮಾನಕ್ಕೆ ಬಂದರು.

ರಾಜಬೀದಿಯಿಂದ ಶಾಮರಾಯಾಚಾರ್ಯರ ಶಿಲ್ಪ ಕಲಾಕೇಂದ್ರ ಸಾಕಷ್ಟು ದೂರವಿದ್ದುದರಿಂದ ಶಿಲ್ಪಪ್ರೇಮಿಗಳಿಗೆ ತೊಂದರೆಯಾದೀತೇ? ತಮ್ಮ ಶಿಲ್ಪಕಾರ್ಯಕ್ಕೆ ಅಡಚಣೆಯಾದೀತೇ? ಎಂಬ ಪ್ರಶ್ನೆಗಳು ಶಾಮರಾಯಾಚಾರ್ಯರನ್ನು ಬಾಧಿಸದೇ ಇಲ್ಲ. ಇದರೊಂದಿಗೆ ಮತ್ತೊಂದು ಯೋಚನೆ ಹುಟ್ಟಿಕೊಂಡಿತು. ಶಿಷ್ಯರನ್ನು ಸ್ವೀಕರಿಸಿ 'ಕೇಂದ್ರ'ವನ್ನು 'ಶಾಲೆ'ಯನ್ನಾಗಿ ಪರಿವರ್ತಿಸಿದರೆ ಹೇಗೆ?- ಇದೇ ಆ ಯೋಚನೆ.

ಶ್ರೀ ವಿಜಯ ಶಿಲ್ಪಶಾಲೆ - ಎಂಬ ನೂತನ ನಾಮಕರಣದೊಂದಿಗೆ ಶಿಷ್ಯರ ಬೇಟೆಗೆ ತೊಡಗಿದರು.

ವಿಶ್ವಬ್ರಾಹ್ಮಣರು ಸಿಂಧೂಕೊಳ್ಳದ ಕಾಲದಿಂದ ಇತಿಹಾಸದುದ್ದಕ್ಕೂ ಪಂಚಶಿಲ್ಪ ಸೃಷ್ಟಿಯ ಮೂಲಕ ಭಾರತೀಯ ಧರ್ಮ, ಸಂಸ್ಕೃತಿ, ಕಲೆಗಳಿಗೆ ವಿಶ್ವಮಾನ್ಯತೆಯನ್ನು ಗಳಿಸಿಕೊಟ್ಟವರು - ಎಂಬ ಸತ್ಯ ಸಂಶೋಧಕರ ಶೋಧನೆಯಿಂದ ಬೆಳಕಿಗೆ ಬಂದಿದ್ದರೂ, ರಾಜಾಶ್ರಯ ತಪ್ಪಿದ ಬಳಿಕ ದಟ್ಟ ದಾರಿದ್ರ್ಯಕ್ಕೊಳಗಾಗಿ ವಿಶ್ವಬ್ರಾಹ್ಮಣರ ವಿದ್ವತ್ತು, ಕಲೆ ಎಲ್ಲವೂ ಹ್ರಾಸ ಹೊಂದುತ್ತ ಬಂದು, ಶಿಲ್ಪ ವಿದ್ಯೆಯಲ್ಲಿಯ ಮಮಕಾರವನ್ನೇ ಶಿಲ್ಪಿಗಳು ಕಳಕೊಂಡು, ಬದುಕಿನ ದಾರಿಯೇ ಬೇರಾಗುತ್ತಿದ್ದ ಕಾಲದಲ್ಲಿ, ಶಿಲ್ಪವಿದ್ಯೆಗೆ ಶಿಷ್ಯನನ್ನು ಆರಿಸುವುದು ಅಷ್ಟು ಸುಲಭದ ಕೆಲಸವಲ್ಲ. ಪುಣ್ಯವಶಾತ್ ಶಾಮರಾಯಾಚಾರ್ಯರಿಗೆ ಶೇಷಪ್ಪಾಚಾರ್ಯರು ಗುರುವಿಗೆ ತಕ್ಕ ಶಿಷ್ಯನಾಗಿ ಶ್ರದ್ಧೆಯಿಂದ ಪ್ರಾಥಮಿಕ ಹಂತದಿಂದಲೇ ಶಿಲ್ಪ ಸಾಧನೆಯನ್ನು ಗೈಯುತ್ತ ಬಂದು, ಗುರುಗಳ ಶಿಲ್ಪ ಕಾರ್ಯದಲ್ಲಿ ನೆರವಾಗುತ್ತ ಬಂದರು.

## ಶಿಲ್ಪಶಾಸ್ತ್ರ ಅಧ್ಯಯನ

ದೇವ ಪ್ರತಿಮೆ ಎಂದರೆ ಕೇವಲ ಅದೊಂದು ಬೊಂಬೆಯ ರಚನೆಯಂತಲ್ಲ. ಪುರೋಹಿತವರ್ಗದ ನಿತ್ಯಪೂಜೆಗೆ ಅರ್ಹವಾಗಿ, ಭಕ್ತಾದಿಗಳಲ್ಲಿ ಭಕ್ತಿಯ ಆವೇಶ, ಆನಂದವನ್ನು ಸ್ಫುರಿಸುವಷ್ಟು ಪ್ರಭಾವವನ್ನು ಬೀರಬೇಕು. ದೇವಪ್ರತಿಮೆಗಳಲ್ಲಿ ವಿಶಿಷ್ಟ ಶಕ್ತಿಯ ಆವಾಹನೆಯಾಗ ಬೇಕಿದ್ದರೆ ಪ್ರತಿಮೆ ಶಾಸ್ತ್ರ ಶುದ್ಧವಾಗಿರಬೇಕಾದ್ದು ಅತೀಮುಖ್ಯ - ಇತ್ಯಾದಿ ಅನುಭವಗಳನ್ನು ಓದು, ಹಿರಿಯ ಶಿಲ್ಪಿಗಳ ಅನುಭವದ ನುಡಿಗಳಿಂದ, ಶಿಲ್ಪದ ಮಹತ್ವಿಕೆಯನ್ನು ಅರಿತಿದ್ದ ಶಾಮರಾಯಾಚಾರ್ಯರ ಒಲವು ಸ್ವಾಭಾವಿಕವಾಗಿಯೇ ಶಿಲ್ಪಶಾಸ್ತ್ರದೆಡೆಗೆ ಹರಿಯಿತು. ಆಳವಾದ ಶಿಲ್ಪಶಾಸ್ತ್ರಾಧ್ಯಯನ ದಿಂದ ಪ್ರತಿಮಾ ಲಕ್ಷಣ, ತಾಳಮಾನ ಇತ್ಯಾದಿ ಶಿಲ್ಪ ರಹಸ್ಯಗಳನ್ನು ಅರಿಯಬೇಕು

ಎಂಬ ಉತ್ಕಟ ಹಂಬಲ ಶಾಮರಾಯಾಚಾರ್ಯರಲ್ಲಿ ಉದಯಿಸಿತು. ಆದರೆ, ಶಿಲ್ಪಶಾಸ್ತ್ರಗಳು ಎಲ್ಲಿ ಸಿಗುತ್ತವೆ? ಶಿಲ್ಪಶಾಸ್ತ್ರದ ಪಾಠವನ್ನು ಹೇಳುವ ಗುರುಗಳೆಲ್ಲಿ? - ಈ ಶೋಧನೆಯಲ್ಲೇ ಕೆಲವು ಕಾಲ ಕಳೆಯಿತು.

ಕಟ್ಟಕಡೆಗೆ ಶಾಮರಾಯಾಚಾರ್ಯರ ಪಾಲಿಗೆ ಬಂದ ಅಮೂಲ್ಯ ಶಿಲ್ಪಶಾಸ್ತ್ರಗಳೆಂದರೆ ತಂತ್ರ ಸಮುಚ್ಚಯ, ರೂಪಮಂಡನಗಳು. ವಾಸ್ತುಶಾಸ್ತ್ರತಜ್ಞ ಮುನಿಯಂಗಳ ಕೃಷ್ಣಭಟ್ಟರ ಮೂಲಕ ಈ ಗ್ರಂಥಗಳನ್ನು ಪಡೆಯುವ ಭಾಗ್ಯ ಒದಗಿತು.

ತಂತ್ರ ಸಮುಚ್ಚಯ ಸಂಸ್ಕೃತ ಶ್ಲೋಕ, ಮಲಯಾಳ ಭಾಷಾಂತರದಿಂದ ಕೂಡಿದ ಗ್ರಂಥ. ರೂಪಮಂಡನ ಸಂಸ್ಕೃತ ಗ್ರಂಥ.

ಸಂಸ್ಕೃತ ವಿದ್ವಾನ್ ದೇವದಾಸ ಶರ್ಮರ ಪರಿಚಯವಾದುದು ಅದೊಂದು ದೈವಯೋಗ. ಶಾಮರಾಯಾಚಾರ್ಯರ ಶಿಲ್ಪ ಸಾಧನೆ, ಶಿಲ್ಪ ಶಾಸ್ತ್ರಾಧ್ಯಯನದಲ್ಲಿಯ ಅವರ ಶ್ರದ್ಧೆಯನ್ನು ಮನನ ಮಾಡಿದ ದೇವದಾಸ ಶರ್ಮರು ಶಾಮರಾಯಾಚಾರ್ಯರಿಗೆ ಶಿಲ್ಪಶಾಸ್ತ್ರ ಪಾಠವನ್ನು ನಡೆಸಿಕೊಡಲು ಒಪ್ಪಿಕೊಂಡರು.

ದೇವದಾಸ ಶರ್ಮರ ಮನೆಯಲ್ಲೇ ಶಿಲ್ಪಶಾಸ್ತ್ರ ಪಾಠ ನಡೆಯಿತು. ತಂತ್ರ ಸಮುಚ್ಚಯ ಒಂದು ಅಪೂರ್ವ ಗ್ರಂಥ. ಈ ಗ್ರಂಥದ ಪಾಠದ ಮೂಲಕ ಬಿಂಬ ಲಕ್ಷಣ, ಆಯುಧಗಳು ಇತ್ಯಾದಿಗಳ ಪೂರ್ಣಜ್ಞಾನವನ್ನು ಶಾಮರಾಯಾಚಾರ್ಯರು ಪಡೆಯಲು ಶಕ್ತರಾದರು.

ದೇವದಾಸ ಶರ್ಮರಾದರೂ ಶಿಲ್ಪಕ್ಕೆ ಶಾಸ್ತ್ರ ಬಹುಮುಖ್ಯ ಎಂಬುದನ್ನು ಅರಿತಿದ್ದವರು. 'ಶಿಲ್ಪಶಾಸ್ತ್ರದ ಆಳವಾದ ಅಧ್ಯಯನದಿಂದ ಶಿಲ್ಪ ಪರಿಶುದ್ಧ, ಪರಿಶುದ್ಧ ಶಿಲ್ಪದಿಂದ ಭಕ್ತರಲ್ಲಿ ಆಧ್ಯಾತ್ಮಿಕ ವಿದ್ಯೆಯ ಪ್ರಲೋಭನ'- ಎಂಬ ವಿಚಾರವನ್ನೆಲ್ಲ ಮನನ ಮಾಡಿಕೊಂಡಿದ್ದ ದೇವದಾಸ ಶರ್ಮರು 'ಅರೆದು ಕುಡಿಸಿದಂತೆ' ಶಾಮರಾಯಾಚಾರ್ಯರಿಗೆ ಬಹುಶ್ರದ್ಧೆಯಿಂದ ಶಿಲ್ಪಶಾಸ್ತ್ರ ಜ್ಞಾನವನ್ನು ನೀಡಿದರು. ರೂಪಮಂಡನ ಗ್ರಂಥಪಾಠದಿಂದ ತಾಲಮಾನ, ವಿಗ್ರಹರಚನೆ, ಪತಾಕೆ, ಮುದ್ರೆ, ಲಾಂಛನ ಲಕ್ಷಣ ಕರಗತವಾಯಿತು.

ಶಿಲ್ಪಶಾಸ್ತ್ರದ ಪಾಠ ನಡೆದಿದ್ದಂತೆ ಶಾಮರಾಯಾಚಾರ್ಯರಲ್ಲಿ ವಿಶಿಷ್ಟವಾದ ಅನುಭವಗಳು ತುಂಬಿಕೊಂಡು, ಅವರ ಚಿಂತನ, ಮನನ, ದೃಷ್ಟಿಕೋನಗಳಲ್ಲಿ ವಿಶೇಷ ಮಾರ್ಪಾಟುಗಳಾದವು.

ಪ್ರತಿಮಾ ರಚನೆಯಲ್ಲಿ ನವತಾಲ, ದಶತಾಲ ಹಾಗೂ ವಾಸ್ತುಶಿಲ್ಪದಲ್ಲಿ ಆಯಾ

ಪ್ರಮಾಣ ಇತ್ಯಾದಿ ರಹಸ್ಯ, ಅವುಗಳ ಮಹತ್ವವನ್ನು ಶಾಮರಾಯಾಚಾರ್ಯರು ಆಳವಾಗಿ ಅಧ್ಯಯನಿಸಿಕೊಂಡರು.

ಶಿಲ್ಪಶಾಸ್ತ್ರಾಧ್ಯಯನದ ಪರಿಣಾಮವಾಗಿ ಶಾಮರಾಯಾಚಾರ್ಯರ ಶಿಲ್ಪ ಕೃತಿಗಳಲ್ಲಿ ಶಾಸ್ತ್ರಶುದ್ಧಿಯೊಂದಿಗೆ, ಮನಮೋಹಕ ಸೌಂದರ್ಯದ ಬೆಸುಗೆಯಾಯಿತು.

ಪ್ರತಿಮಾರಚನೆಗೆ ಧ್ಯಾನ ಶ್ಲೋಕಗಳೇ ಆಧಾರ. ದೇವಿ, ದುರ್ಗಾ, ಚಾಮುಂಡೇಶ್ವರಿ, ರಾಜರಾಜೇಶ್ವರಿ ಇವೆಲ್ಲವೂ ದೇವಿಯ ನಾಮಗಳೇ ಆದರೂ ಶಿಲ್ಪಶಾಸ್ತ್ರದ ಧ್ಯಾನ ಶ್ಲೋಕಗಳಲ್ಲಿ ವಿಭಿನ್ನ ರೂಪಗಳ ವರ್ಣನೆಗಳೇ ಇವೆ. ಹೀಗೆಯೇ, ರಾಮ, ಕೃಷ್ಣ, ಲಕ್ಷ್ಮಿ, ಗಣಪತಿ - ಇವರೆಲ್ಲರ ನಾನಾ ರೂಪಗಳ ಧ್ಯಾನವಿದೆ. ಇವೆಲ್ಲವೂ ಶಾಮರಾಯಾಚಾರ್ಯರಿಗೆ ಕರತಲಾಮಲಕ. ಶಾಮರಾಯಾಚಾರ್ಯರಿಗೆ ಬಹುಪಾಲು ಧ್ಯಾನ ಶ್ಲೋಕಗಳು ಕಂಠಸ್ಥವಾಗಿರುವದರಿಂದ ಭಕ್ತಾದಿಗಳ ಪ್ರತಿಮೆಯ ಬೇಡಿಕೆಗೆ ಧ್ಯಾನಶ್ಲೋಕಗಳ ಮೂಲಕ ಶೀಘ್ರ ಸದುತ್ತರವನ್ನು ನೀಡಲು ಸಾಧ್ಯವಾಗುತ್ತಿತ್ತು. ಇದರಿಂದ ಭಕ್ತರಿಗೂ ಸಂತೃಪ್ತಿ. ದೇವಾಲಯ ನಿರ್ಮಾಣ ಶಾಸ್ತ್ರದಲ್ಲಿ ಶಾಮರಾಯಾಚಾರ್ಯರದು ಪ್ರಗಲ್ಭ ಪಾಂಡಿತ್ಯ. ದೇವಾಲಯ ನಿರ್ಮಾಣ ವಿಚಾರ ವಿಮರ್ಶೆಯಲ್ಲಿ ಧಾರಾಳ ಶ್ಲೋಕಾಧಾರಗಳನ್ನು ನೀಡಿ ಭಕ್ತರನ್ನು ಸಂತುಷ್ಟರನ್ನಾಗಿಸುವ ಚಾಕಚಕ್ಯತೆ.

## ಶಿಷ್ಯ ಬಳಗ

ಶಿಲ್ಪ, ದೇವಾಲಯಗಳ ನಿರ್ಮಾಣ ಕಾರ್ಯ ಹೆಚ್ಚಾದಂತೆ ಶಾಮರಾಯಾಚಾರ್ಯರು ಹಲವು ತರುಣರನ್ನು ಶಿಷ್ಯರನ್ನಾಗಿ ಸ್ವೀಕರಿಸಿದರು. ಶಿಲ್ಪ, ದೇವಾಲಯಗಳ ಮಹತ್ವದ ಬಗೆಗೆ ಭಕ್ತ ಜನರು ಸಾಕಷ್ಟು ಚಿಂತನ ಮಂಥನ ನಡೆಸುತ್ತಿದ್ದುದರಿಂದ, ಶಿಲ್ಪ ಸಾಧಕರು ನಿಧಾನವಾಗಿ ಹುಟ್ಟಿಕೊಳ್ಳುವ ಅವಕಾಶವಾಗಿ ಶಿಷ್ಯರನ್ನು ಗಳಿಸುವುದು ಶಾಮರಾಯಾಚಾರ್ಯರಿಂದ ಸಾಧ್ಯವಾಯಿತು.

ಶಿವರಾಮ ಆಚಾರ್ಯ, ಜನಾರ್ಧನ ಆಚಾರ್ಯ, ಸದಾಶಿವ ಆಚಾರ್ಯ, ದಾಮೋದರ ಆಚಾರ್ಯ - ಹೀಗೆ ಶಿಷ್ಯರ ಸಂಖ್ಯೆ ಹತ್ತರಗಡಿ ದಾಟಿತು.

ಹಿರಿಯ ಶಿಷ್ಯ ಶೇಷಪ್ಪಾಚಾರ್ಯರು ಹತ್ತು ವರ್ಷಗಳಿಗೂ ಮಿಗಿಲಾಗಿ ಶಿಷ್ಯತ್ವವನ್ನು ವಹಿಸಿಕೊಂಡು, ಶಿಲ್ಪ, ದೇವಾಲಯದ ನಿರ್ಮಾಣದಲ್ಲಿ ಸಿದ್ಧಹಸ್ತರಾಗಿ ಹಲವು ದೇವಾಲಯಗಳನ್ನು ನವೀಕರಿಸಿದ ಖ್ಯಾತಿಗೆ ಒಳಗಾಗಿದ್ದಾರೆ. ದ್ವಿತೀಯ ಶಿಷ್ಯ ಶಿವರಾಮ

ಆಚಾರ್ಯರೂ ಏಳೆಂಟು ವರ್ಷಗಳ ಶಿಲ್ಪ ಸಾಧನೆಯ ನಂತರ ಸ್ವತಂತ್ರ ಶಿಲ್ಪಿಯಾಗಿ ಶಿಲ್ಪ ಕಾರ್ಯದಲ್ಲಿ ಹೆಸರನ್ನು ಗಳಿಸುತ್ತಿದ್ದಾರೆ.

ಗಣೇಶ ಆಚಾರ್ಯ, ಪ್ರಕಾಶ ಆಚಾರ್ಯ, ರವೀಂದ್ರ ಆಚಾರ್ಯ, ಸದಾಶಿವ ಗುಡಿಗಾರ, ಜಯ, ತಮಿಳು ನಾಡಿನವರಾದ ವೇಲು ಆಚಾರ್ಯ, ಗಣೇಶ ಸ್ವಾಮಿ, ಮುರುಗ ಇವರೆಲ್ಲ ಇಂದು ಸ್ವತಂತ್ರ ಶಿಲ್ಪಿಗಳಾಗಿ ಬದುಕನ್ನು ಸಾಗಿಸುತ್ತಿರುವ ಶಿಷ್ಯರು.

ಈ ಶಿಷ್ಯ ಬಳಗದ ಶ್ರದ್ಧಾಪೂರ್ಣ ದುಡಿತದಿಂದ ಶಾಮರಾಯಾಚಾರ್ಯರು ಹತ್ತು ಹಲವು ದೇವ ಪ್ರತಿಮೆ, ದೇವಾಲಯಗಳ ನಿರ್ಮಾಣ ಕಾರ್ಯವನ್ನು ನಿರ್ವಹಿಸಿ ಕೃತಕೃತ್ಯರಾಗಿದ್ದಾರೆ.

## ಶಿಲ್ಪ ನಿರ್ಮಾಣ

ಸ್ವತಂತ್ರ ಬದುಕಿನ ಕಲ್ಪನೆ, ಜೊತೆಗೆ ಸೋಲು-ಗೆಲುವಿನ ತಾಕಲಾಟದ ಮನಸ್ಥಿತಿಯೊಂದಿಗೆ ಶಿಲ್ಪ ಕಲಾರಂಗಕ್ಕೆ ಕಾಲೂರಿದ ಶಾಮರಾಯಾಚಾರ್ಯರಿಗೆ, ಶಿಲ್ಪ ಪ್ರೇಮಿಗಳ ತುಂಬು ಹೃದಯದ ಪ್ರೋತ್ಸಾಹದಿಂದ ತಾನು ಬದುಕಿನಲ್ಲಿ ಯಶಸ್ಸನ್ನು ಸಾಧಿಸಲು ಸಮರ್ಥನಾದೆ ಎನ್ನುವ ಸಂತೃಪ್ತಿಯೊಳಗೆ, ಸಮಾಜದ ಪೋಷಣೆಯಿಂದ ವ್ಯಕ್ತಿಯ ಉತ್ಕರ್ಷ ಎಂಬ ಸತ್ಯದ ತಿಳಿಬೆಳಕು ಇದೆ.

ಒಂದು ಕಾಲದಲ್ಲಿ ಕಲೆಗೆ ಹೆಮ್ಮೆಪಟ್ಟುಕೊಳ್ಳಬಹುದಾದಂತಹ ಪ್ರೋತ್ಸಾಹವಿದ್ದಿರದ ಜಿಲ್ಲೆಯೊಳಗೆ ಐನೂರಕ್ಕಿಂತಲೂ ಅಧಿಕ ಶಿಲ್ಪ ಕೃತಿಗಳನ್ನು ರಚಿಸಿರುವ ಶಿಲ್ಪವರ್ಯರೊಬ್ಬರಿರುವರು ಎಂದರೆ ಅದೊಂದು ಅಭಿಮಾನಾಸ್ಪದ ವಿಚಾರವಲ್ಲವೇ? ಇಂತಹ ಹಿರಿಮೆಗೆ ಪಾತ್ರರಾದವರು ಶಾಮರಾಯಾಚಾರ್ಯರು. ದೇಶ ವಿದೇಶಗಳಲ್ಲಿ ಹರಡಿಕೊಂಡಿರುವ ಶಾಮರಾಯಾಚಾರ್ಯರ ಕೃತಿಗಳ ಸಂಖ್ಯೆ ಐನೂರಕ್ಕಿಂತಲೂ ಅಧಿಕ. ಇವುಗಳಲ್ಲಿ ದೇವಾಲಯಗಳಲ್ಲಿ ಪ್ರತಿಷ್ಠೆಗೊಂಡು ದಿನವೂ ಪೂಜೆಗೊಂಡು, ಸಾವಿರಾರು ಭಕ್ತರಿಂದ ಭಕ್ತಿಯ ನಮನಗಳನ್ನು ಸ್ವೀಕರಿಸುತ್ತಿರುವ ದೇವ ಪ್ರತಿಮೆಗಳು ಹಲವು. ದೇಶಾದ್ಯಂತ ಪೂಜೆಗೊಳ್ಳುತ್ತಿರುವ ತಮ್ಮ ಕುಲದ ಶಿಲ್ಪಾಚಾರ್ಯರಿಂದ ರಚಿತ ದೇವಪ್ರತಿಮೆಗಳ ಸಾಲಿನಲ್ಲಿ ತನ್ನವೂ ಇವೆಯಲ್ಲ ಎಂಬ ಧನ್ಯತಾಭಾವ ಶಾಮರಾಯಾಚಾರ್ಯರದು.

ಪಡುಬಿದ್ರಿಯ ವೀರಭದ್ರ (5 ಅಡಿಗಳ ಎತ್ತರ), ವಯನಾಡು (ಕೇರಳ), ಜಿನಬಿಂಬ (5 ಅಡಿಗಳು), ಸಾತ್‌ರಸ್ತೆ (ಮುಂಬಯಿ)ಯ ಗಣಪತಿ ( $3\frac{1}{2}$ ಅಡಿಗಳು)

ಕಾರ್ಕಳ, ಮುಲ್ಕಿ, ಕುಂದಾಪುರ ಕಾಲೇಜುಗಳ ಟಿ.ಎಂ.ಎ.ಪೈ. ವಿಗ್ರಹಗಳು ($3\frac{3}{4}$ ಅಡಿಗಳು), ಅಮ್ಮೆಂಬಳ ಸುಬ್ಬರಾವ್ ಪೈ (2 ಅಡಿಗಳು- ಕೆನರಾಬ್ಯಾಂಕ್ - ಕುದ್ರೋಳಿ) ಪೋರ್ಟ್ ಮುಂಬಯಿಯ ಪಂಚಲೋಹದ ತ್ರಿಭುವನೇಶ್ವರಿ ($4\frac{1}{2}$ ಅಡಿಗಳು) ಶಾಮರಾಯಾಚಾರ್ಯರ ಶಿಲ್ಪ ಚಾತುರ್ಯಕ್ಕೆ ಮಾದರಿಯಾಗಿ ನಿಂತ ಕೆಲವು ಕೃತಿಗಳು.

ಶಾಮರಾಯಾಚಾರ್ಯರಿಗೆ ರಾಷ್ಟ್ರಮಟ್ಟದ ಖ್ಯಾತಿಯನ್ನು ತಂದ ಕೃತಿ ಡೆಲ್ಲಿಯ ಮೆಹರೌಲಿಯಲ್ಲಿ ಪ್ರತಿಷ್ಠೆಗೊಂಡ ಮಹಾವೀರ. ($13\frac{1}{2}$ ಅಡಿಗಳು) ಧ್ಯಾನ ಮುದ್ರೆಯಲ್ಲಿರುವ ಈ ಮಹಾನ್ ಕೃತಿಯಲ್ಲಿ ಭಗವಾನ್ ಮಹಾವೀರನ ಅಂತಃ ತೇಜಸ್ಸು ಮುದ್ರಿತವಾಗಿದೆ.

ವಿದೇಶಗಳಿಗೆ ಸಾಗಿರುವ ಕೃತಿಗಳಲ್ಲಿ ಕ್ವೀನ್ಸ್ ಲ್ಯಾಂಡಿನ (ಲಂಡನ್) ಕೃಷ್ಣ ($1\frac{1}{2}$ ಅಡಿಗಳು), ಕೆನಡಾದ ದೇವೇಂದ್ರ (2 ಅಡಿಗಳು) ಜಪಾನಿನ ಪದ್ಮಾವತಿ ಯಕ್ಷಿ - ಕುಕ್ಕುಟೋರಗವಾಹನ ($11\frac{1}{2}$ ಅಡಿಗಳು), ಬುದ್ಧ (1 ಅಡಿ - ಜಪಾನ್) ಜಪಾನಿನ ಶಾಕುಂತಲ (4 ಅಡಿಗಳು) ಜಪಾನಿನ ಅವಲೋಕಿತೇಶ್ವರ (4 ಅಡಿಗಳು) ಮುಖ್ಯವಾದವು.

ಏಕಶಿಲಾ ಧ್ವಜಸ್ತಂಭಗಳಲ್ಲಿ ಕುಡುಪು ಧ್ವಜಸ್ತಂಭ (43 ಅಡಿಗಳು) ಉಡುಪಿ (ಹೆರ್ಗ) ಧ್ವಜಸ್ತಂಭ (50 ಅಡಿಗಳು) ಮಾಳ (ಕಾರ್ಕಳ) ಮಾನಸ್ತಂಭ (22 ಅಡಿಗಳು) ಪ್ರಸಿದ್ಧವಾದವು.

ಮಧ್ಯಪ್ರದೇಶದ ವೃಷಭನಾಥ ತೀರ್ಥಂಕರ ($7\frac{1}{2}$ ಅಡಿಗಳು) ಕೃತಿ ಭಾವಪೂರ್ಣ ಅನುಪಮ ಕೃತಿ.

ಮಾರ್ಷೆಲ್ ಗೋವಾದ ದೇವಕೀ ಕೃಷ್ಣ ($2\frac{1}{2}$ ಅಡಿಗಳು) ಲಕ್ಷ್ಮೀನಾರಾಯಣ ($2\frac{1}{2}$ ಅಡಿಗಳು) ಈ ಕೃತಿಗಳು ಶಾಮರಾಯಾಚಾರ್ಯರ ಕೀರ್ತಿಯನ್ನು ಗೋವಾಕ್ಕೆ ತಲುಪಿಸಿವೆ.

ರಾಜಸ್ಥಾನದ ಚಂದ್ರಪ್ರಭಾ ತೀರ್ಥಂಕರ (17 ಅಡಿಗಳು) ಸಿದ್ಧಗೊಳ್ಳುತ್ತಿರುವ, ಶಾಮರಾಯಾಚಾರ್ಯರಿಂದ ರಚಿಸಲ್ಪಟ್ಟ ಕೃತಿಗಳಲ್ಲೆಲ್ಲ ಬೃಹತ್ತಾದುದು.

ಪೂರ್ಣ ಪ್ರಮಾಣದಲ್ಲಿ ಹಲವು ದೇವಾಲಯಗಳನ್ನು ಶಾಸ್ತ್ರೋಕ್ತ ವಿಧಾನದಲ್ಲಿ ನಿರ್ಮಿಸಿ ಭಕ್ತರಿಗೆ ಒಪ್ಪಿಸಿದವರು ಶಾಮರಾಯಾಚಾರ್ಯರು.

ಕೇರಳದ ತ್ರಿಕನ್ನಾಡು ಶಿವದೇವಾಲಯದ ಗರ್ಭಗುಡಿ, ಸುಂಕದ ಕಟ್ಟೆ ಅಂಬಿಕಾ ಅನ್ನಪೂರ್ಣೇಶ್ವರಿ ದೇವಾಲಯದ ಗರ್ಭಗುಡಿ, ದೇವರ ಪ್ರತಿಮೆ, ಸಗ್ರಿ ಗೋಪಾಲ ಕೃಷ್ಣ, ಸಾಮಗರ ವಾಸುಕಿ ಸುಬ್ರಹ್ಮಣ್ಯ ದೇವಸ್ಥಾನ, ಸಿದ್ಧಕಟ್ಟೆಯ ಪೂಂಚಾ ದುರ್ಗಾಪರಮೇಶ್ವರಿ ದೇವಸ್ಥಾನದ ಗರ್ಭಗುಡಿ, ಪಣಂಬೂರಿನ ನಂದನೇಶ್ವರ ದೇವಾಲಯ, ಕೇರಳದ ಕಣ್ಣನೂರಿನ ಸುಂದರೇಶ್ವರ ದೇವಸ್ಥಾನ ಪರಿವಾರ ದೇವತೆಗಳಾದ ಗಣಪತಿ, ಸುಬ್ರಹ್ಮಣ್ಯ, ದುರ್ಗಾ, ಬಸವಗಳೇ ಅಲ್ಲದೆ, ಅವೆಷ್ಟೋ ಜೀರ್ಣಗೊಂಡ ದೇವಾಲಯಗಳನ್ನು ಆಯಾ ಪ್ರಮಾಣಕ್ಕೆ ಹೊಂದಿಸಿ, ಜೀರ್ಣೋದ್ಧಾರಕ್ಕೆ ಅನುವು ಮಾಡಿದವರು ಶಾಮರಾಯಾಚಾರ್ಯರು.

ಸಾಮಾನ್ಯತೆ, ದೇವಪ್ರತಿಮೆ, ದೇವಾಲಯ ನಿರ್ಮಾಣದಲ್ಲೇ ನಿರತ ಸಾಂಪ್ರದಾಯಿಕ ಶಿಲ್ಪಿ ಆಧುನಿಕ ಶಿಲ್ಪದೆಡೆಗೆ ದೃಷ್ಟಿ ಹಾಯಿಸುವುದಿಲ್ಲ. ಆದರೆ, ಶಾಮರಾಯಾಚಾರ್ಯರು ಇದಕ್ಕೆ ಅಪವಾದ. ಇವರು ಎರಡೂ ಶೈಲಿಯಲ್ಲಿ ಚತುರರು.

ಇವರು ಟಿ.ಎಂ.ಎ.ಪೈ. ಅಮ್ಮೆಂಬಳ ಸುಬ್ಬರಾವ್ ಪೈ, ಪೌರಾಣಿಕ ಶಾಕುಂತಲ, ಕುರುಬ, ಹಾವಾಡಿಗ - ಕೃತಿಗಳು ಶಾಮರಾಯಾಚಾರ್ಯರ ಶಿಲ್ಪ ಸೃಷ್ಟಿಯ ಮತ್ತೊಂದು ಮುಖದ ದರ್ಶನವನ್ನು ಮಾಡಿಸುತ್ತವೆ.

## ಸಾಂಸಾರಿಕ ಜೀವನ

ಕಲಾವಿದನ ಬದುಕಿನಲ್ಲಿ ಸುಖದ ದಿನಗಳಿಗಿಂತ ಕಷ್ಟದ ದಿನಗಳೇ ಅಧಿಕ. ಬಹುಶಃ ಕಲಾವಿದ ಕಷ್ಟಯಾತನೆಗಳ ಮೂಸೆಯಲ್ಲಿ ಕರಗಿ ಪರಿಪಕ್ವವಾದಾಗಲೇ ಅನುಪಮ ಕೃತಿಗಳ ಸೃಷ್ಟಿಗೆ ಕಾರಣವಾಗುತ್ತದೇನೋ......

ಶಾಮರಾಯಾಚಾರ್ಯರ ಬದುಕೂ ಅಷ್ಟೆ. ಬಾಲ್ಯದಲ್ಲಿ ಬಡತನದ ಬಾಳಿನ ಗೋಳು. ಜೊತೆಗೆ ನಿರಂತರ ಬದುಕಿಗಾಗಿ ಹೋರಾಟ. ಬದುಕು ಒಂದು ಹಂತವನ್ನೇರುವಾಗ ನೋವಿನ ಬರೆ.

ಶಾಮರಾಯಾಚಾರ್ಯರು ಸುಮಿತ್ರಾರನ್ನು ವಿವಾಹವಾಗಿ ಗೃಹಸ್ಥ ಜೀವನಕ್ಕೆ ಪ್ರವೇಶಿಸಿದರು, ಸರಸ ದಾಂಪತ್ಯದ ಫಲವಾಗಿ ಎರಡು ಗಂಡು, ಎರಡು ಹೆಣ್ಣು ಮಕ್ಕಳನ್ನು ಪಡೆದರು.

ಎಲೆಕ್ಟ್ರಿಕಲ್ ಡಿಪ್ಲೊಮಾ ಗಳಿಸಿರುವ ಹಿರಿಯಪುತ್ರ ಸತೀಶನು ವಾಸ್ತುಶಿಲ್ಪ ವಿದ್ಯೆಯಿಂದ ಆಕರ್ಷಿತನಾಗಿ ತೀರ್ಥರೂಪರೊಂದಿಗೆ ದೇವಾಲಯ ನಿರ್ಮಾಣದಲ್ಲಿ ಸಹಕರಿಸುತ್ತ,

ತೀರ್ಥರೂಪರಿಂದ ವಾಸ್ತುವಿದ್ಯೆಯ ಗುಟ್ಟನ್ನು ಪಡೆದು, ಸ್ವತಂತ್ರವಾಗಿ ಶಾಸ್ತ್ರೋಕ್ತವಾಗಿ ದೇವಾಲಯದ ನಕ್ಷೆ ತಯಾರಿಸಿ, ದೇವಾಲಯ ನಿರ್ಮಿಸಿಕೊಡುವಷ್ಟು ಪ್ರಬುದ್ಧತೆಯನ್ನು ಗಳಿಸಿರುವುದರಿಂದ ಶಾಮರಾಯಾಚಾರ್ಯರಿಗೆ ತುಂಬು ಸಂತೃಪ್ತಿ. ಬದುಕಿನಲ್ಲಿ ಸಾಕಷ್ಟು ಶ್ರಮವಹಿಸಿ ಸಂಪಾದಿಸಿರುವ ವಾಸ್ತುಶಿಲ್ಪ ವಿದ್ಯೆ ಸಾಫಲ್ಯ ಪಡೆದ ಧನ್ಯತಾಭಾವ.

ಬದುಕು ಒಂದು ಕೈಗೆ ಸಿಹಿಯನ್ನು, ಇನ್ನೊಂದು ಕೈಗೆ ಕಹಿಯನ್ನು ನೀಡುತ್ತದೆ. ಎರಡನ್ನು ಮೆಲ್ಲಬೇಕಾದ್ದು ಜೀವನ ಧರ್ಮ. ದ್ವಿತೀಯಪುತ್ರ ರಾಜೇಶ್ ಸ್ನಾತಕೋತ್ತರ ಪದವಿ (ಎಂ.ಬಿ.ಎ.)ಗಳಿಸುವ ಸಿದ್ಧತೆಯಲ್ಲಿದ್ದಾಗಲೇ ಅಪಘಾತದಿಂದ ಅಸುನೀಗಿದ್ದು ಶಾಮರಾಯಾಚಾರ್ಯರ ಬದುಕಿನ ಮಹಾನೋವಿನ ಘಟನೆ. ಆದರೆ, ಶಾಮರಾಯಾಚಾರ್ಯರು ಸುಖ ದುಃಖವನ್ನು ಸಮಭಾವದಿಂದ ಕಾಣುವ ಸ್ಥಿತಪ್ರಜ್ಞರಂತೆ ಬದುಕುತ್ತ ಬಂದಿರುವದೊಂದು ವಿಶೇಷ.

ಶಿಲ್ಪ ಸಂಬಂಧಿ ಪ್ರಶ್ನೆಗಳಿಗೆ ಆನಂದೋತ್ಸಾಹದಿಂದ ನಿರರ್ಗಳವಾಗಿ ಉತ್ತರಿಸುತ್ತ ಸಾಗುವ ಶಾಮರಾಯಾಚಾರ್ಯರು, ತಮ್ಮ ಪುತ್ರನ ಅಕಾಲ ಮೃತ್ಯುವಿನ ಬಗೆಗೆ ಪ್ರಸ್ತಾಪಿಸುವಾಗ 'ಎಲ್ಲ ದೈವಯೋಗ. ಅವನೇ ಕಾರಣ ನಮ್ಮ ಕೈಯಲ್ಲೇನಿದೆ?' ಎಂಬ ಭಾವದಿಂದಲೇ ಮಾತು ಮುಗಿಸುತ್ತಾರೆ. ಇಬ್ಬರು ಪುತ್ರಿಯರು ಪತಿ ಗೃಹವನ್ನು ಸೇರಿದ್ದಾರೆ.

ಪತ್ನಿ, ಪುತ್ರ, ಮಕ್ಕಳು, ಮೊಮ್ಮಕ್ಕಳೊಂದಿಗಿನ ಶಾಮರಾಯಾಚಾರ್ಯರ ಬದುಕು ಸಾಧನೆಯ ಸಾಫಲ್ಯವನ್ನು ಕಂಡ ಸಂತೃಪ್ತ ಬದುಕು.

ಇಲ್ಲಿ, ಶಾಮರಾಯಾಚಾರ್ಯರಿಗೆ ಹೊಸ ಹುರುಪನ್ನು ನೀಡುತ್ತಿರುವ ಅಂಶವೆಂದರೆ ಇವರ ಮೊಮ್ಮಗನೊಬ್ಬ ಶಿಲ್ಪದಲ್ಲಿ ತೋರುತ್ತಿರುವ ವಿಶೇಷ ಆಸಕ್ತಿ. ತಮ್ಮ ಪುತ್ರನ ಬದುಕಿನ ಯಶಸ್ಸನ್ನು ಕಂಡು ಸಂತೃಪ್ತಗೊಂಡಿದ್ದ ಮಾತೃಶ್ರೀಯವರು ಮೂರು ವರ್ಷಗಳ ಹಿಂದಷ್ಟೇ ತೀರಿಕೊಂಡಿದ್ದರೆ, ತೀರ್ಥರೂಪರು ಹದಿನೈದೇ ವರ್ಷಗಳ ಹಿಂದೆ ಕಾಲವಶರಾಗಿದ್ದರು.

## ಶಿಲ್ಪಶಾಸ್ತ್ರ ಪಾಂಡಿತ್ಯ

ಪ್ರಾಚೀನ ಶಿಲ್ಪಿಗಳು ಲೋಹ, ಕಾಷ್ಠ, ಎರಕ, ಶಿಲೆ, ಚಿನ್ನ-ಬೆಳ್ಳಿ- ಶಿಲ್ಪಗಳಲ್ಲಿ ಚತುರರಾಗಿದ್ದುದಲ್ಲದೆ, ವೇದ, ಶಾಸ್ತ್ರ, ಪುರಾಣ, ವ್ಯಾಕರಣ, ಜ್ಯೋತಿಷ್ಯ, ಚಿತ್ರ, ಸಂಗೀತ, ನೃತ್ಯ, ಲೋಹ ವಿಜ್ಞಾನ, ಯಂತ್ರ ಶಿಲ್ಪ, ಶಿಲ್ಪಶಾಸ್ತ್ರಗಳಲ್ಲೆಲ್ಲ

ಪರಿಣತರಾಗಿದ್ದಂತೆ ಸಾಹಿತ್ಯ, ಶಾಸನಗಳಿಂದ ವ್ಯಕ್ತವಾಗುತ್ತವೆ. ಈ ಎಲ್ಲ ವಿದ್ಯೆಯೂ ಒಂದಲ್ಲ ಒಂದು ವಿಧದಲ್ಲಿ ಶಿಲ್ಪ ಸೃಷ್ಟಿಯಲ್ಲಿ ಸಹಾಯಕ ಎಂದೇ ಶಿಲ್ಪಿಗಳು ಸಕಲ ವಿದ್ಯಾ ಪಾರಂಗತರಾಗಿರುತ್ತಿದ್ದರು.

ಆದರೆ, ಇತ್ತೀಚೆಗಿನ ದಿನಗಳಲ್ಲಿ ಶಿಲ್ಪ ಹಾಗೂ ಶಾಸ್ತ್ರ ಪಾಂಡಿತ್ಯಗಳೆರಡರಲ್ಲೂ ಪ್ರಬುದ್ಧರಾದ ಶಿಲ್ಪಿಗಳ ದರ್ಶನ ಲಾಭ ದುರ್ಲಭ. ಶಿಲ್ಪಶಾಸ್ತ್ರ ಪರಿಣತಿಯಲ್ಲಿ ಶಿಲ್ಪಸೃಷ್ಟಿಯ ಪರಿಶುದ್ಧತೆ ಅಡಗಿದೆ ಎಂಬ ಜ್ಞಾನ ಶಿಲ್ಪಿಗಳಲ್ಲಿ ಲುಪ್ತವಾಗಿರುವುದು ಇದಕ್ಕೆ ಕಾರಣ.

ಈ ದೃಷ್ಟಿಯಿಂದ ಶಾಮರಾಯಾಚಾರ್ಯರ ಸಾಧನೆ ಹಿರಿದಾದುದು. ಶಿಲ್ಪ ಪ್ರವೀಣತೆಯೊಂದಿಗೆ, ಶಿಲ್ಪಶಾಸ್ತ್ರ ಜ್ಞಾನವು ಇವರಲ್ಲಿ ಸಮ್ಮಿಲನಗೊಂಡಿದೆ. ಕಲಾವಿದರಲ್ಲಿ ಮಾತುಗಾರರು ವಿರಳ. ಆದರೆ, ಶಾಮರಾಯಾಚಾರ್ಯರು ಸಂಭಾಷಣಾ ಚತುರರೂ ಕೂಡ. ಶಿಲ್ಪದ ಬಗೆಗೆ ಪ್ರಶ್ನೆಯೊಡ್ಡಿದಾಗ 'ಇದಮಿತ್ಥಂ' ಎಂದು ಖಚಿತ ಉತ್ತರವನ್ನು ನೀಡಿ ಪೃಚ್ಛಕರನ್ನು ಸಂತುಷ್ಟಪಡಿಸುತ್ತಾರೆ.

ಆಯ ಎಂದರೆ ಜೀವ ಎಂದರ್ಥ. ಪ್ರಮಾಣದಿಂದಲೇ ಸೌಂದರ್ಯ- ಜೀವಕಳೆ ಎನ್ನುವ ಶಾಮರಾಯಾಚಾರ್ಯರು ಆಯದ ಬಗ್ಗೆ ಶಾಸ್ತ್ರಾಧಾರವನ್ನು ನೀಡುತ್ತಾರೆ.

ಮಾನಂ ದಾಮ್ನಾಸ್ತು ಸಂಪೂರ್ಣಂ।
ಜಗತ್ ಸಂಪೂರ್ಣತಾ ಭವೇತ್ ॥
ಪ್ರಮಾಣೇ ಸ್ಥಾಪಿತಾಃ ದೇವಾಃ।
ಪೂಜಾರ್ಹ ಭವಂತಿ ಹೀ ॥

ಆಯ ಪ್ರಮಾಣದಲ್ಲಿ ರಚಿಸಲ್ಪಟ್ಟಿರುವ ದೇವಾಲಯದಲ್ಲಿ, ತಾಲಮಾನ ಪೂರ್ವಕ ನಿರ್ಮಾಣ ಮಾಡಿದ ಪ್ರತಿಮೆ ಪ್ರತಿಷ್ಠೆಯೋಗ್ಯ.

ಆಯ ಪ್ರಮಾಣದೊಳಗಿನ ರಹಸ್ಯ ಇದು. ಒಂದು ಕುರ್ಚಿ ಅಥವಾ ಕತ್ತಿ ಯಾವುದೇ ಇರಲಿ, ಅದಕ್ಕೊಂದು ಆಯ ಪ್ರಮಾಣವಿದೆ. ಆಗಲೇ ಅಲ್ಲೊಂದು ಸೌಂದರ್ಯ, ಆಕರ್ಷಣೆ ತುಂಬಿರುತ್ತದೆ. ಇದೂ ಆಯ ಪ್ರಮಾಣದ ಸೊಗಸಿನ ಉಲ್ಲೇಖ - ಶಾಮರಾಯಾಚಾರ್ಯರಿಂದ.

ಪೂರ್ವಾಭಿಮುಖದ ದೇವಾಲಯ ವೃಷಭ ಆಯ. ಪಶ್ಚಿಮಾಭಿಮುಖ ಧ್ವಜ ಆಯ. ಉತ್ತರಾಭಿಮುಖ ಸಿಂಹ ಆಯ. ದಕ್ಷಿಣಾಭಿಮುಖ ಗಜ ಆಯ - ಎಂದಿದ್ದರೂ

ಪ್ರಕೃತಿ ಲಕ್ಷಣಕ್ಕೆ - ಎತ್ತರ ತಗ್ಗು - ಅನುಸರಿಸಿ ವಾಸ್ತುವಿಗೆ ಸಮನಾಗಿ ದೇವರ ದಿಕ್ಕುಗಳ ನಿರ್ಣಯ - ಎನ್ನುತ್ತಾರೆ ಶಾಮರಾಯಾಚಾರ್ಯರು.

## ಆಯ ಪ್ರಮಾಣ

ಆಯ ಪ್ರಮಾಣ ಅದೊಂದು ಗಣಿತ ಸೂತ್ರ. ಪ್ರತೀ ಆಯಕ್ಕೂ ಒಂದು ನಿರ್ದಿಷ್ಟ ಸಂಖ್ಯೆ ಇದೆ. [ಉದಾ: ಧ್ವಜ ಆಯದ ಸಂಖ್ಯೆ ಹನ್ನೊಂದು. ಸಿಂಹ ಆಯದ ಸಂಖ್ಯೆ ಇಪ್ಪತ್ತೈದು, ವೃಷಭ ಆಯದ ಸಂಖ್ಯೆ ಇಪ್ಪತ್ತೂರು] ಆಯದ ಸಂಖ್ಯೆಗೆ ಎಂಟನ್ನು ಸೇರಿಸುತ್ತ, ಮೊತ್ತವನ್ನು ನಾಲ್ಕು ಪಾಲುಗಳನ್ನಾಗಿಸುವ ಮೂಲಕ ಆಯವನ್ನು ಹಿರಿದಾಗಿಸಿಕೊಳ್ಳಬಹುದು.

ದೇವಾಲಯ, ಗೃಹಗಳ ಆಯ ಪ್ರಮಾಣ ತಪ್ಪಿದಾಗ ಅಲ್ಲಿ ಸಂಘರ್ಷ, ನಷ್ಟ-ಕಷ್ಟ-ಇತ್ಯಾದಿಗಳು ಹುಟ್ಟಿಕೊಳ್ಳುತ್ತವೆ. ಮೇಲ್ನೋಟಕ್ಕೆ ಈ ವಿಚಾರ ಅಸಂಬದ್ಧ ವೆನಿಸಬಹುದಾದರೂ, ಆಯ ಪ್ರಮಾಣದೊಳಗಿನ ಅವಕಾಶ ಜನಮನದ ಮೇಲೆ ಬೀರುವ ಪ್ರಭಾವವನ್ನು ಮಥಿಸಿದಾಗ, ಶಾಮರಾಯಾಚಾರ್ಯರ ವಿಚಾರದಲ್ಲಿ ವೈಜ್ಞಾನಿಕ ಸತ್ಯದ ನಿಗೂಢತೆಯ ಅರಿವಾಗುವುದು ಖಂಡಿತ. ಬಹುಶಃ ಅವಕಾಶವು ಮಾನಸಿಕ ಪ್ರಭಾವವನ್ನು ಬೀರುತ್ತಿರಬೇಕು.

ಈಜಿಪ್ಟಿನ ಪಿರಮಿಡ್ಡುಗಳೊಳಗಿನ ಅವಕಾಶವನ್ನು ವೈಜ್ಞಾನಿಕವಾಗಿ ಅಧ್ಯಯನಿಸಿ, ಪ್ರಯೋಗಿಸಿದ ವಿಶ್ವದ ವಿಜ್ಞಾನಿಗಳು ಅವಕಾಶದೊಳಗೆ ಉತ್ಪತ್ತಿಯಾಗುವ ಶಕ್ತಿ, ತಿಂಗಳುಗಟ್ಟಲೆ ತರಕಾರಿಗಳನ್ನು ಕೊಳೆಸದ ಹಾಗೂ ಇನ್ನಿತರ ಪ್ರಯೋಗಗಳಿಂದ ಅವಕಾಶದೊಳಗಿನ ವಿಶಿಷ್ಟ ಶಕ್ತಿಯನ್ನು ಗುರುತಿಸಿ ಸುಮ್ಮನಾಗುವುದಿಲ್ಲ. ವಿಶ್ವದ ಅವಕಾಶದೊಳಗೆ ಹುದುಗಿರುವ [ವಿಶ್ವವ್ಯವಸ್ಥೆಯು] ಶಕ್ತಿ, ಮಾನವ ದೇಹದೊಳಗೆ ಪ್ರವಹಿಸುತ್ತಿರುವ ಶಕ್ತಿ - ಇವುಗಳೊಳಗಿನ ಸಂಬಂಧ ಇತ್ಯಾದಿ ವಿಶ್ಲೇಷಣದಿಂದ ಆಯ ಪ್ರಮಾಣ - ಅವಕಾಶಗಳೇ ಜೀವ ಜೀವಾಳವಾಗಿರುವ [ವಾಸ್ತು] ದೇವಾಲಯ [ಗರ್ಭಗುಡಿ] ಒಂದು ಶಕ್ತಿ -ಅಲ್ಲಿಗಾಗಮಿಸುವ ಭಕ್ತರೊಳಗಿನ ಶಕ್ತಿಗಳೊಳಗೆ ಸಂಪರ್ಕ ಸೇತು ದೇವಾಲಯವಾಗುತ್ತದೆ. [ಬಹುಶಃ ಆಧ್ಯಾತ್ಮ ಚಿಂತನದಲ್ಲಿ ಢಾಳಾಗಿ ಗೋಚರಿಸುವ ಆತ್ಮ [ವ್ಯಕ್ತಿ] ಪರಮಾತ್ಮ [ದೇವರು] ಸಮ್ಮಿಲನಕ್ಕೆ ದೇವಾಲಯ ಒಂದು ಮಾರ್ಗ [ಕೇಂದ್ರ] ಎಂಬರ್ಥವನ್ನು ಸೂಚಿಸುತ್ತದೆ.

ಆಯ ಪ್ರಮಾಣದ ಶುದ್ಧಿಯಿಂದ ಸುಖ. [ಅಂದರೆ, ಅವಕಾಶದ ಶಕ್ತಿಯಿಂದ

ಮಾನಸಿಕ ನೆಮ್ಮದಿ] ಆನಂದಮಯ ಮನಸ್ಸಿನಿಂದ ಸದ್ಗುಣ-ಸನ್ನಡತೆಯ ಅಭಿವ್ಯಕ್ತಿ. ಆಗ, ಅಲ್ಲಿ ಸಂಘರ್ಷವಿಲ್ಲ. ಸುಖ.

ಮಾನವ ಮನಸ್ಸಿನ ಮೇಲೆ ಬೀರುವ ಅವಕಾಶ [ವಾಸ್ತುವಿನಲ್ಲಿ] ದ ಅಧ್ಯಯನ ಅದೊಂದು ವಿಜ್ಞಾನ - ಮನೋವಿಜ್ಞಾನ ಎಂದೆನ್ನಿಸಲೂ ಬಹುದು. ಆಯ - ಪ್ರಮಾಣ - ಅವಕಾಶದ ಕುರಿತು ಶಾಮರಾಯಾಚಾರ್ಯರಲ್ಲಿ ಮಾತಿಗಿಳಿದಾಗ ವಿಚಾರವು ಗಂಭೀರ-ಗೂಢವಾಗುತ್ತ ಸಾಗುತ್ತದೆ.

## ತಾಲಮಾನ

ಆಯದಂತೆ ತಾಲಮಾನ ಶಿಲ್ಪದ ಒಂದು ವಿಶೇಷ ಅಂಶ. ಇಲ್ಲಿಯೂ ಶಾಮರಾಯಾಚಾರ್ಯರ ವಿದ್ವತ್ತು ಪ್ರವಾಹರೂಪ.

ಬಿಂಬ (ಮುಖ) ವನ್ನು ಅಂಶಮಾಡಿಕೊಂಡು ಅವಯವಗಳ ರಚನೆ-ಇದೇ ತಾಲಮಾನ. ಬಿಂಬದ ಎತ್ತರದ ಒಂಭತ್ತು ಪಾಲು-ನವತಾಲ. ನವತಾಲದ ಪ್ರಮಾಣ ಇದು. ಉಷ್ಣೀಷ ಕಾಲು ತಾಲ- ಬಿಂಬ (ಮುಖ) ಒಂದು ತಾಲ. ಕುತ್ತಿಗೆಭಾಗ ಕಾಲುತಾಲ. ಕುಚ-ಎದೆ ಒಂದು ತಾಲ. ನಾಭಿ ಒಂದು ತಾಲ. ನಾಭಿಯಿಂದ ಮೇಢ್ರ (ಲಿಂಗ) ಒಂದು ತಾಲ. ಮೇಢ್ರದಿಂದ ಮೊಣಕಾಲು ಗಂಟು- ಎರಡು ತಾಲ. ಗಂಟು ಕಾಲುತಾಲ. ಕಣಕಾಲು ಎರಡು ತಾಲ. ಪಾದ ಕಾಲುತಾಲ.

ಇದು ನಿಂತಭಂಗಿಯ ನವತಾಲ ಪ್ರಮಾಣ. ಕುಳಿತ ಭಂಗಿಯಲ್ಲಿ ನಾಲ್ಕು ಮುಕ್ಕಾಲು ತಾಲಪ್ರಮಾಣ. ಸ್ತ್ರೀವಿಗ್ರಹ ದಶತಾಲ. ಕಾಶ್ಯಪಶಿಲ್ಪದ ಪ್ರಕಾರ ದಶತಾಲ.

ಶಾಸ್ತ್ರಶುದ್ಧವಿಗ್ರಹ ನಿರ್ಮಾಣ ಮಾಡಿದ ಶಿಲ್ಪಾಚಾರ್ಯನೇ ಮಂತ್ರ ಪೂರ್ವಕ ವಿಗ್ರಹದ ನೇತ್ರೋನ್ಮೀಲನ ಮಾಡಿ, ಪ್ರತಿಷ್ಠೆ ಮಾಡಬೇಕೆಂದು ಗಾರ್ಗೆಯಾಗಮದ ಆದೇಶ ಇದೆ - ಎಂದು ಶಾಮರಾಯಾಚಾರ್ಯರು ಇದಕ್ಕೆ ಆಧಾರ ನೀಡುತ್ತಾರೆ.

ದೃಷ್ಟಿ ನಿರ್ಮಾಣ ಕಾಲೇಚ
ಪ್ರಾಣ ಸಂಸ್ಥಾಪನೇಪಿ ಚ।
ಮಂತ್ರ ತಂತ್ರ ಪ್ರಭಾವಜ್ಞಃ
ಕಾರಯೇತ್ ಶಿಲ್ಪಿ ಕೋತ್ತಮಃ॥

ನೇತ್ರೋನ್ಮಿಲನ ಮತ್ತು ಪ್ರಾಣಪ್ರತಿಷ್ಠೆ ಮಂತ್ರ ತಂತ್ರ ವಿಶಾರದನಾದ ಶಿಲ್ಪಿ ಮಾಡಬೇಕು.

ಶಿಲ್ಪಿಯೇ ನೇತ್ರೋನ್ಮಿಲನ, ಪ್ರತಿಷ್ಠಾ ಕಾರ್ಯವನ್ನು ನಿರ್ವಹಿಸುತ್ತಿದ್ದ ಕಾಲ ಅಂದು. ರಾಜಾಶ್ರಯದ ದಿನಗಳು ಇಲ್ಲವಾಗಿ, ದಟ್ಟ ದಾರಿದ್ರ್ಯದ ಕಷ್ಟ ಕಾರ್ಪಣ್ಯಗಳಿಗೆ ಒಳಗಾದ ಶಿಲ್ಪಿಗಳು ಪೂರ್ವಜರ ಸರ್ವಶಾಸ್ತ್ರಜ್ಞಾನ, ಶಿಲ್ಪಜ್ಞಾನ, ಪ್ರತಿಷ್ಠಾವಿಧಿ ಜ್ಞಾನ - ಎಲ್ಲವನ್ನೂ ಕಳೆದುಕೊಂಡ ಸ್ಥಿತಿಯಲ್ಲಿ ಶಿಲ್ಪ ಸೃಷ್ಟಿಮಾತ್ರ ಶಿಲ್ಪಾಚಾರ್ಯರ ಪಾಲಿಗೆ ಉಳಿದುದು ಚಾರಿತ್ರಿಕ ಸತ್ಯ - ಎಂಬುದನ್ನು ಶಾಮರಾಯಾಚಾರ್ಯರು ಸ್ಮರಿಸಿಕೊಳ್ಳುತ್ತಾರೆ.

ಉತ್ತರ ದಕ್ಷಿಣದ ರೇಖೆ ಸತ್ಯರೇಖೆ. ಪೂರ್ವ ಪಶ್ಚಿಮದ್ದು ಬ್ರಹ್ಮರೇಖೆ. ಪ್ರತಿಮೆ ಅಷ್ಟಬಂಧ ಪ್ರತಿಷ್ಠೆಗೊಳ್ಳುತ್ತಿರುವಾಗ ಪ್ರತಿಮೆಯು ತೂಕ ಜಲಮಟ್ಟಕ್ಕೆ ಸರಿಯಾಗಿ ಹೊಂದಿಕೊಂಡು, ಪ್ರತಿಮೆಯ ದೃಷ್ಟಿ ಬ್ರಹ್ಮರೇಖೆಯಲ್ಲಿ ಇದ್ದಾಗ ಸರ್ವರಿಗೂ ಸೌಖ್ಯ. ಈ ದಿಕ್ಕು ತಪ್ಪಿದಾಗ ಬದುಕಿನ ದಿಕ್ಕು ತಪ್ಪುವ ಸಂಭವ. ಈ ತೂಕಕ್ಕೆ ಸರಿಯಾಗಿ ಪ್ರತಿಷ್ಠಾಕಾರ್ಯ ಮಿಕ್ಕವರಿಗೆ ಸುಲಭ ಸಾಧ್ಯವಲ್ಲ. ಈ ದೃಷ್ಟಿಯಿಂದ ಶಿಲ್ಪಿ ಈ ಕಾರ್ಯವನ್ನು ನಿರ್ವಹಿಸುತ್ತಿದ್ದ - ಎನ್ನುವ ಶಾಮರಾಯಾಚಾರ್ಯರು ಪ್ರತಿಷ್ಠೆಯಲ್ಲಿಯ ಒಂದು ರಹಸ್ಯದೆಡೆಗೆ ಬೆಳಕು ಚೆಲ್ಲುತ್ತಾರೆ.

ಶಾಮರಾಯಾಚಾರ್ಯರು ಈ ದೇವವಿಧಿಯನ್ನು ಕೈ ಬಿಟ್ಟಿಲ್ಲ. ನಾಗಪ್ರತಿಮೆ, ದೇವ ಪ್ರತಿಮೆಗಳಿಗೆ ಶಾಮರಾಯಾಚಾರ್ಯರೇ ಸ್ವತಃ ವೇದೋಕ್ತ ಶಿಲ್ಪ ಪೂಜೆ ಸಲ್ಲಿಸಿ, ಭಕ್ತರಿಗೆ ಸಕಲ ಇಷ್ಟಾರ್ಥವನ್ನು ಕರುಣಿಸುವಂತೆ ಪ್ರಾರ್ಥಿಸಿ, ಪ್ರತಿಮೆಗಳನ್ನು ಭಕ್ತರಿಗೆ ಒಪ್ಪಿಸುವಾಗ ಹನಿಗಣ್ಣರಾಗುತ್ತಾರೆ. (ಧ್ಯಾನ ಶ್ಲೋಕದೊಂದಿಗೆ ಶಿಲ್ಪ ಸೃಷ್ಟಿಯಲ್ಲಿ ತನ್ಮಯನಾಗುವ ಶಿಲ್ಪಿಯ ಅಂತರಂಗದ ಒಂದು ಭಾಗವೇ ಆಗಿ ಪ್ರತಿಮೆ ಪೂರ್ಣ ಸೌಂದರ್ಯದಿಂದ ಸಿದ್ಧಗೊಂಡಾಗ ಕೃತಿಯಲ್ಲಿ ಅನನ್ಯ ಭಕ್ತಿ ಪ್ರೇಮಗಳು ನೆಲಸಿದ ಪರಿಣಾಮವಾಗಿ, ಶಿಲ್ಪವನ್ನು ಭಕ್ತರಿಗೆ ಒಪ್ಪಿಸುವಾಗ ಕೃತಿಯ ಅಗಲಿಕೆಯ ದುಃಖ, ಭಕ್ತರ ಶ್ರೇಯೋಭಿವೃದ್ಧಿಗಾಗಿ ತೆರಳುವ ಕೃತಿಗಾಗಿ ಆನಂದಾಶ್ರು - ಇದು ಶಿಲ್ಪಿಯ ಸಹಜ ಕ್ರಿಯೆ - ಪ್ರತಿಕ್ರಿಯೆ.)

ಶಿಲ್ಪಿಗೆ ಶಿಲ್ಪಶಾಸ್ತ್ರ ಅಧ್ಯಯನ ಬಹುಮುಖ್ಯ. ಇದು ಶಾಮರಾಯಾ ಚಾರ್ಯರ ಸಾಧನೆ ಒಂದು ಮುಖವೂ ಅಹುದು.

ಶಾಸ್ತ್ರಮಾನೇನ ಯೋ ರಮ್ಯಃ
ಸರಮ್ಯೋ ನಾನ್ಯ ಏವಹಿ
ಶಾಸ್ತ್ರಮಾನ ವಿಹೀನಂ ಯದ
ರಮ್ಯಂ ತದ್ವಿ ಪಶ್ಚಿತಂ ||

ಶಾಸ್ತ್ರ ಪ್ರಕಾರ ರಚಿಸಲ್ಪಟ್ಟ ಸುಂದರ ಪ್ರತಿಮೆ ಪೂಜಾರ್ಹ. ಶಾಸ್ತ್ರಶುದ್ಧಿ ಇಲ್ಲದ ಸುಂದರ ಮೂರ್ತಿಯಾದರೂ ಪೂಜಾರ್ಹವಲ್ಲ.

ಇದು ಶಿಲ್ಪ, ಶಿಲ್ಪಶಾಸ್ತ್ರದೊಳಗಿನ ಸಂಬಂಧ. ಶಾಮರಾಯಾಚಾರ್ಯರ ಶಾಸ್ತ್ರ ಅನುಭವ.

ಗೋಮಟನ ವೈರಾಗ್ಯಭಾವ, ಶಾಂತಿ ಸಹನೆಯ ಅಂತಃ ತೇಜಸ್ಸನ್ನು ರೂಪಿಸುವುದೋ, ಬೇಲೂರಿನ ಶಿಲಾಬಾಲಿಕೆಯರಲ್ಲಿ ಮನೋಲ್ಲಾಸವನ್ನು ನೀಡುವ ತಾಯಿತನವನ್ನು ಕಡೆಯುವುದೋ..... ಅಷ್ಟು ಸುಲಭದ ಕಾರ್ಯವಲ್ಲ. ನಿತ್ಯ ಸಂಧ್ಯಾ, ಜಪ, ಧ್ಯಾನ, ಪೂಜೆ ಪುರಸ್ಕಾರಗಳಿಂದ ದೈವೀ ಸಂಪತ್ತನ್ನು ಶಿಲ್ಪಿ ಸಂಪಾದಿಸಿಕೊಳ್ಳಬೇಕು. ನಿರ್ಮಲಾಂತಃ ಕರಣ ಜೀವಕಾರುಣ್ಯ ಶಾಸ್ತ್ರಪಾಂಡಿತ್ಯ ನವರಸ ಧ್ಯಾನ ಇವೆಲ್ಲದರ ಪಕ್ವತೆಯನ್ನು ಸಾಧಿಸಿದ ಶಿಲ್ಪಿಯ ಕೃತಿ, ಶಾಂತಿ, ಆನಂದ, ಜೀವಕಾರುಣ್ಯ ಇತ್ಯಾದಿ ಭಾವಗಳನ್ನು ಉದ್ದೀಪಿಸುತ್ತವೆ. ಆದ್ದರಿಂದ ಶಿಲ್ಪಿಯೋಗಿಯಾಗಿರಬೇಕು- ಹೀಗೆ ಶಿಲ್ಪಿ ಲಕ್ಷಣ ಕೃತಿಯ ಶ್ರೇಷ್ಠತೆ ಇವೆಲ್ಲ ಶಾಮರಾಯಾಚಾರ್ಯರಿಂದ ಪ್ರವಹಿಸುವ ಅಧ್ಯಯನ ಅನುಭವದ ಭಾವಧಾರೆ. ಭೋಗಿಶಿಲ್ಪಿಯ ಸೃಷ್ಟಿ ಅದು ಸುಂದರ ಬೊಂಬೆ. ಯೋಗಿ ಶಿಲ್ಪಿಯ ಸೃಷ್ಟಿ ಅದು ಅಧ್ಯಾತ್ಮಿಕತೆಯ ಕಡೆಗೆ ಭಕ್ತರನ್ನು ಕರೆದೊಯ್ಯುವ ಶಕ್ತಿಸಂಪನ್ನ ದೇವಪ್ರತಿಮೆ – ಇದು ಶಾಮರಾಯಾಚಾರ್ಯರ ದೃಷ್ಟಿ.

## ಕರ್ನಾಟಕ ಶಿಲ್ಪ ಕಲಾ ಅಕಾಡೆಮಿ

ವಿಶ್ವದಲ್ಲೇ ಅನುಪಮ ಶಿಲ್ಪ, ವಾಸ್ತುಶಿಲ್ಪ ಕಲಾಸಂಪತ್ತನ್ನು ಹೊಂದಿರುವ ದೇಶ ಭಾರತ ಎಂಬುದು ತ್ರಿಕಾಲ ಸತ್ಯ. ವಿಭಿನ್ನ ಶಿಲ್ಪ-ವಾಸ್ತುಶಿಲ್ಪ ಶೈಲಿಗಳಿಂದ ಶ್ರೀಮಂತವಾಗಿರುವ ಕರ್ನಾಟಕ ಭಾರತದ ಕಣ್ಮಣಿ ಎನ್ನುವ ಮಾತು ಉತ್ಪ್ರೇಕ್ಷೆಯಲ್ಲ. ಇಂತಹ ಕಲಾಸ್ವರ್ಗ ಕರ್ನಾಟಕದಲ್ಲಿ ಶಿಲ್ಪಕಲೆಯ ಪುನರುತ್ಥಾನಕ್ಕಾಗಿ ದೇಶದಲ್ಲೇ ಪ್ರಥಮವಾಗಿ ಹುಟ್ಟಿಕೊಂಡ ಸಂಸ್ಥೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿ.

ಕಲಾಪ್ರೇಮಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರಿಂದ ಶಿಲ್ಪಕಲಾ ಅಕಾಡೆಮಿಯ ಸ್ಥಾಪನೆಗೆ ಪ್ರೇರಣೆ, ಪ್ರೋತ್ಸಾಹ ಒದಗಿ ಬಂದುದು ಒಂದು ದೈವಯೋಗ. ಅವರ ಅಧಿಕಾರಾವಧಿಯಲ್ಲೇ ಶಿಲ್ಪ ಕಲಾ ಅಕಾಡೆಮಿ ಅಸ್ತಿತ್ವಕ್ಕೆ ಬಂದಿತು.

ಶಿಲ್ಪಕಲಾ ಅಕಾಡೆಮಿಯ ಯೋಜನೆಗಳ ಅನುಷ್ಠಾನದ ಅಧ್ವರ್ಯುವಾಗಿ, ತಮ್ಮ ಶಿಲ್ಪ ಕಲಾನುಭವವನ್ನು ಹಂಚುವ ಶಿಲ್ಪಾಚಾರ್ಯರ ಆಗಮನದ ನಿರೀಕ್ಷೆ ಶಿಲ್ಪಕಲಾ ಅಕಾಡೆಮಿಯದಿತ್ತು. ಶಿಲ್ಪ ಕಲಾ ನಿಪುಣರು, ಶಿಲ್ಪ ಪ್ರೇಮಿಗಳ ಒಮ್ಮನಸ್ಸಿನ ಆಯ್ಕೆಗೆ ಕಾರ್ಕಳದ ಖ್ಯಾತ ಶಿಲ್ಪಿ ಶಾಮರಾಯಾಚಾರ್ಯರು ಪಾತ್ರರಾಗಿ, ಅಕಾಡೆಮಿಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುವಂತಾದುದು ಶಾಮರಾಯಾಚಾರ್ಯರ ಕಲಾತಪಸ್ಸು, ನಿರಂತರ ಸಾಧನೆ, ಶಿಲ್ಪಶಾಸ್ತ್ರ ವಿಚಕ್ಷಣತೆಗೆ ಸಂದ ಪರಮ ಗೌರವ.


ಶಿಲ್ಪಕಲಾ ಅಕಾಡೆಮಿಯ ಪ್ರಪ್ರಥಮ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ದಿನಗಳಲ್ಲಿ ಶಾಮರಾಯಾಚಾರ್ಯರು ಗಾಢ ಚಿಂತನೆಗೊಳಗಾದರು. ವಿಶೇಷ ವಿದ್ಯಾವಂತನಲ್ಲದ, ಕೇವಲ ಶಿಲ್ಪ ಸೃಷ್ಟಿಯ ಅನುಭವವನ್ನಷ್ಟೆ ಪಡೆದಿರುವ ತಾನು, ರಾಜ್ಯಮಟ್ಟದ ಹಿರಿದಾದ ಶಿಲ್ಪ ಕಲಾ ಅಕಾಡೆಮಿ ಸಂಸ್ಥೆಯ ಕಾರ್ಯ ಯೋಜನೆಗಳನ್ನು ರೂಪಿಸುವ ಬಗೆ ಹೇಗೆ? ಯೋಜನೆಗಳು ಹೇಗಿರಬೇಕು? ಇತ್ಯಾದಿ ಪ್ರಶ್ನೆಗಳು ಶಾಮರಾಯಾಚಾರ್ಯರನ್ನು ಕದಡದೇ ಇರಲಿಲ್ಲ.

ಈ ಮಧ್ಯೆ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರ ಅಧಿಕಾರಾವಧಿ ಪೂರ್ತಿಗೊಂಡು, ದೇವೇಗೌಡರು ಮುಖ್ಯಮಂತ್ರಿ ಸ್ಥಾನವನ್ನು ವಹಿಸಿಕೊಂಡರು. ಶಿಲ್ಪಕಲಾ ಅಕಾಡೆಮಿಯು ರದ್ದಾಗುವದೆಂಬ ಸುದ್ದಿ ಇದ್ದಂತೆಯೇ, ಶಾಮರಾಯಾಚಾರ್ಯರು ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯುವ ಆದೇಶ ಬಂದಾಗ ಸುದ್ದಿ ಎಲ್ಲವೂ ತಣ್ಣಗಾಯಿತು.

ಲಲಿತಕಲಾ ಅಕಾಡೆಮಿಯ ಕಾರ್ಯ ಚಟುವಟಿಕೆಗಳ ಮೂಲಕ ಅಪಾರ ಅನುಭವವನ್ನು ತುಂಬಿಕೊಂಡಂತಹ ಕಲಾವಿದ, ಕಲಾ ಇತಿಹಾಸಕಾರ ಎನ್. ಮರಿಶಾಮಾಚಾರ್ಯರು ಶಿಲ್ಪಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಆಗಿ ನೇಮಕಗೊಂಡಾಗ ಶಾಮರಾಯಾಚಾರ್ಯರಿಗೆ ಮತ್ತೆರಡು ತೋಳುಗಳು ಹುಟ್ಟಿಕೊಂಡಂತಾಗಿ ಆತ್ಮಬಲ ಹೆಚ್ಚಿತು. ಅಕಾಡೆಮಿಯ ಕಾರ್ಯಯೋಜನೆಗಳನ್ನು ರಿಜಿಸ್ಟ್ರಾರ್, ಅಕಾಡೆಮಿಯ ಸದಸ್ಯರ ಪೂರ್ಣ ಸಹಕಾರದಿಂದ ರೂಪಿಸಿ ಕಾರ್ಯಗತಗೊಳಿಸಿ ಸಂತೃಪ್ತವಾಗಬಹುದೆಂಬ ಅಚಲ ವಿಶ್ವಾಸದಿಂದ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾದ ಶಾಮರಾಯಾಚಾರ್ಯರು ಮುಕ್ತಮನದಿಂದ ಕಾರ್ಯ ಪ್ರವೃತ್ತರಾದರು.



ದೇವಿ



ಮಹಾವೀರ



ವೇಣುಗೋಪಾಲ



ವಿಶ್ವಕರ್ಮ



ಗಣಪತಿ


ಸರಸ್ವತಿ


ಕಾಳಿ



ಮುಕುರ ಮೋಹಿನಿ




ಹನುಮಾನ್



ಶಿವ




ಕುರುಬ



ಹಾವಾಡಿಗ




ವೇಣುಗೋಪಾಲ



ಮಹಾವೀರ ಕೃತಿ ವೀಕ್ಷಣೆಗಾಗಿ ಆಗಮಿಸಿದ
ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಬಂಧುಗಳೊಂದಿಗೆ



ಆಂಜನೇಯ



ದ್ವಾರಪಾಲಕರು



ದ್ವಾರಪಾಲಕರು



ಸುಬ್ರಮಣ್ಯ

## ಅಕಾಡೆಮಿಯ ಚಟುವಟಿಕೆಗಳು

ಶಿಲ್ಪಕಲೆಯ ಪುನರುತ್ಥಾನದಲ್ಲಿ ಶಿಲ್ಪಿಗಳ ಪಾತ್ರ ಮಹತ್ತಾದುದು ಎಂದೇ ಶಿಲ್ಪಿಗಳಲ್ಲಿ ವಿಶೇಷ ಹುಮ್ಮಸ್ಸು ತುಂಬುವ ಇರಾದೆಯಿಂದ ಜಕಣಾಚಾರ್ಯ ಪ್ರಶಸ್ತಿ ಸ್ಥಾಪನೆಗೊಂಡು, ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ ಶಾಮರಾಯಾಚಾರ್ಯರು ಆಯ್ಕೆಗೊಂಡರು.

ಪ್ರಥಮ ಜಕಣಾಚಾರ್ಯ ಪ್ರಶಸ್ತಿ ವಿಶೇಷ ಶಿಲ್ಪ ಸಾಧನೆಗಾಗಿ ಪರಮೇಶ್ವರಾಚಾರ್ಯರಿಗೆ ಸಂದಿತು. ಈ ಪ್ರಶಸ್ತಿ- ಪ್ರಶಸ್ತಿ ಫಲಕ, ಒಂದು ಲಕ್ಷ ರೂಪಾಯಿ ನಿಧಿಯನ್ನೊಳಗೊಂಡಿದೆ.

ಶಿಬಿರದಂತಹ ಚಟುವಟಿಕೆ ಕಲಾವಿದರ ಪಾಲಿಗೆ ಹುಮ್ಮಸ್ಸಿನ ಕಾಲ. ಅದಕ್ಕೆಂದೇ ಬೆಂಗಳೂರಿನಲ್ಲಿ (ಇಂದಿರಾನಗರ) ಶಿಲಾಶಿಲ್ಪ ಶಿಬಿರದ ವ್ಯವಸ್ಥೆಯನ್ನು ಶಿಲ್ಪಕಲಾ ಅಕಾಡೆಮಿಯು ಕೈಗೆತ್ತಿಕೊಂಡಿತು. ಇದು ರಾಜ್ಯಮಟ್ಟದ ಶಿಬಿರ. ಹತ್ತುಮಂದಿ ಸಾಂಪ್ರದಾಯಿಕ ಶಿಲ್ಪಿಗಳು ಶಿಬಿರದಲ್ಲಿ ಭಾಗವಹಿಸಿ, ಶಿಲ್ಪರಚನೆಯಲ್ಲಿ ತಮ್ಮ ಪ್ರತಿಭೆಯನ್ನು ಬೆಳಗಿದರು. ಶಿಬಿರದಲ್ಲಿ ರಚನೆಗೊಂಡ ಮುಖ್ಯ ವಿಗ್ರಹಗಳು ಲಕ್ಷ್ಮಿ, ಸರಸ್ವತಿ, ದುರ್ಗಾ.

ಶಿವಾರಪಟ್ಟಣ ಶಿಲ್ಪಗ್ರಾಮವೆಂದೇ ಪ್ರಸಿದ್ಧ. ಅಲ್ಲಿಯ ಮನೆಮನೆಗಳಲ್ಲಿ ದೇವ ಪ್ರತಿಮೆಗಳು ಸೃಷ್ಟಿಗೊಂಡು ದೇಶ, ವಿದೇಶಗಳಿಗೆ ಸಂಚಾರ ಕೈಗೊಳ್ಳುತ್ತಿರುವದೊಂದು ವಿಶೇಷ. ಇಂತಹ, ಶಿಲ್ಪಗ್ರಾಮದಲ್ಲಿ ಶಿಲ್ಪಕಲಾ ಅಕಾಡೆಮಿಯ ದ್ವಿತೀಯ ಶಿಲ್ಪ ಶಿಬಿರವು ಜರುಗಿತು. ಒಂಭತ್ತು ಮಂದಿ ಶಿಲ್ಪಿಗಳು ಈ ಶಿಬಿರದಲ್ಲಿ ಪಾಲುಗೊಂಡು ಸಾಂಪ್ರದಾಯಿಕ ಶಿಲ್ಪ ಕೃತಿಗಳನ್ನು ರಚಿಸಿ ಉಲ್ಲಸಿತರಾದರು.

ಮಹಾನಗರ ಮೈಸೂರಿನಲ್ಲಿ ತೃತೀಯ ಶಿಲ್ಪ ಶಿಬಿರ ವ್ಯವಸ್ಥೆಗೊಂಡಿತು. ಇಲ್ಲಿ ಸಾಂಪ್ರದಾಯಿಕ ಕಾಷ್ಠ ಶಿಲ್ಪರಚನೆಗೆ ಒತ್ತು. ಮೈಸೂರಿನ ಕಲಾಶಾಲೆ ಕಾವಾದ ಪರಿಸರದಲ್ಲಿ ಈ ಶಿಲ್ಪ ಶಿಬಿರ ಶಿಲ್ಪಿಗಳಿಗೆ ವಿಶೇಷ ಉತ್ತೇಜನ ಒದಗಿಸಿತು.

ಬೆಂಗಳೂರಿನ ವೆಂಕಟಪ್ಪ ಆರ್ಟ್ ಗೆಲರಿ ಕನ್ನಡಿಗರ ಮನೆ ಮಾತು. ಶಿಲ್ಪಕಲಾ ಅಕಾಡೆಮಿಯ ನೇತೃತ್ವದ ವರ್ಣರಂಜಿತ 'ಶಿಲ್ಪೋತ್ಸವ'ವು ಈ ಕಲಾಮಂದಿರದಲ್ಲಿ ಜರುಗಿದ್ದು ಔಚಿತ್ಯಪೂರ್ಣ. ಸಾಂಪ್ರದಾಯಿಕ ಶಿಲ್ಪ ಹಾಗೂ ಆಧುನಿಕ ಶಿಲ್ಪ ಪ್ರದರ್ಶನ 'ಶಿಲ್ಪೋತ್ಸವ'ದ ವಿಶೇಷ ಆಕರ್ಷಣೆ. ಶಿಲ್ಪ ಪ್ರೇಮಿಗಳ ಪಾಲಿಗೆ ರಸಾನುಭವವನ್ನು ನೀಡಿದ ವಿಶಿಷ್ಟ ಶಿಲ್ಪೋತ್ಸವ. ವಿದ್ವಾಂಸರಿಂದ ವಿಚಾರಗೋಷ್ಠಿ ಶಿಲ್ಪೋತ್ಸವದ ಪ್ರಧಾನ

ಅಂಶ. ಶಿಲ್ಪದ ವಿವಿಧ ಆಯಾಮಗಳ ವಿಚಾರ ಮಥನದಿಂದ ಶಿಲ್ಪಿಗಳು, ಶಿಲ್ಪ ಪ್ರೇಮಿಗಳಿಗೆ ನೂತನ ಅನುಭವದ ಆನಂದ. 'ಶಿಲ್ಪಶ್ರೀ'- ಎನ್. ಮರಿಶಾಮಾಚಾರ್ಯರ ಸಂಪಾದಕತ್ವದಲ್ಲಿ, ಶಿಲೋತ್ಸವದಲ್ಲಿ ಬೆಳಕು ಕಂಡ ವಿಚಾರ ಪೂರ್ಣ ಸ್ಮರಣ ಸಂಚಿಕೆ.

ವಿಶ್ವವಿಖ್ಯಾತ ಸರಸ್ವತಿ ಮಂದಿರ, ವೀರನಾರಾಯಣ ಗುಡಿಗಳ ಸಂಗಮಸ್ಥಳ ಗದಗದ ಶಿಲಾಶಿಲ್ಪ ಶಿಬಿರದಲ್ಲಿ ಹತ್ತುಮಂದಿ ಶಿಲ್ಪಿಗಳು ಭಾಗವಹಿಸಿ, ತಮ್ಮ ಕಲಾ ನೈಪುಣ್ಯವನ್ನು ಮೆರೆದರು.

ಪ್ರಥಮ ವಾರ್ಷಿಕ ಶಿಲ್ಪ ಕಲಾ ಪ್ರದರ್ಶನವು ಬೆಂಗಳೂರಿನ ವೆಂಕಟಪ್ಪ ಕಲಾ ಶಾಲೆಯಲ್ಲಿ ಏರ್ಪಾಡಾಯಿತು. ರಾಜ್ಯಮಟ್ಟದ ಶಿಲ್ಪಕಲಾ ಪ್ರದರ್ಶನದಲ್ಲಿ 59 ಶಿಲ್ಪಿಗಳು ಭಾಗವಹಿಸಿದ್ದುದು ವಿಶೇಷ. ಐವರು ಶಿಲ್ಪಿವರ್ಯರನ್ನು, ತಲಾ ಐದು ಸಾವಿರ ರೂಪಾಯಿಯ ನಿಧಿ, ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರದೊಂದಿಗೆ ಸತ್ಕರಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಅಕಾಡೆಮಿಯ ಪ್ರಾಯೋಜಕತ್ವದಲ್ಲಿ ಗಿರಿಜನ ಯುವಕರಿಗಾಗಿ ಶಿಲೆ, ಟೆರ್ರಕೋಟಾ ಕಾರ್ಯಾಗಾರವೊಂದು ಬೆಂಗಳೂರಲ್ಲಿ ಜರುಗಿತು.

ಕರ್ನಾಟಕ ಶಿಲ್ಪ ಕಲಾವಿದರ ಪ್ರಥಮ ಸಮ್ಮೇಳನ ಬೆಂಗಳೂರಲ್ಲಿ ಶಿಲ್ಪ, ಶಿಲ್ಪ ಸಂಬಂಧಿ ಹಲವಾರು ವಿಚಾರ ವಿಮರ್ಶೆ, ಚಿಂತನಗಳೊಂದಿಗೆ ಯಶಸ್ವಿಯಾಗಿ ಜರುಗಿದ್ದು ರಸಿಕರ ಪಾಲಿನ ಮಧುರ ಸ್ಮೃತಿ.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು ಮತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿಗಳ ಪ್ರಾಯೋಜಕತ್ವದಲ್ಲಿ ಮಣಿಪಾಲದ ಹಸ್ತ ಶಿಲ್ಪದಲ್ಲಿ ಆಯೋಜಿಸಲ್ಪಟ್ಟ ಒಂದು ವಾರದ ಸಮಕಾಲೀನ ಶಿಲ್ಪ ಕಲಾಶಿಬಿರದಲ್ಲಿ ತಮ್ಮ ಜೀವನಾನುಭವ, ಭಾವನೆಗಳಿಗೆ ಮೂರ್ತರೂಪವನ್ನಿತ್ತು ಶಿಲ್ಪಿಗಳು ರಸಿಕರ ಮನಸ್ಸನ್ನು ತಣಿಸಿದರು.

ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಐದು ಮಂದಿ ಶಿಲ್ಪಿಗಳಿಗೆ ತಲಾ 10 ಸಾವಿರ ರೂಪಾಯಿಗಳ ನಿಧಿ ಸಮರ್ಪಣೆ, ಪ್ರಶಸ್ತಿ ಪತ್ರದೊಂದಿಗೆ ಶಾಲು ಹೊದಿಸಿದ್ದು ಸನ್ಮಾನ ವಿಶೇಷ.

ಅಖಿಲ ಭಾರತ ಮಿನಿ ಶಿಲ್ಪಕಲಾ ಪ್ರದರ್ಶನವನ್ನು ಅಕಾಡೆಮಿಯು ಪ್ರಥಮ ಬಾರಿಗೆ ಆಯೋಜಿಸಿ, ಐದು ಮಂದಿ ಶಿಲ್ಪಿಗಳಿಗೆ ತಲಾ ಐದು ಸಾವಿರ ರೂಪಾಯಿಗಳ ಬಹುಮಾನವನ್ನಿತ್ತು ಸತ್ಕರಿಸಿತು.

ಇವು ಶಿಲ್ಪಕಲಾ ಅಕಾಡೆಮಿಯ ಕಾರ್ಯ ಚಟುವಟಿಕೆಗಳಲ್ಲಿ ಪ್ರಮುಖವಾದವು. ಇಂತಹ ಹತ್ತಾರು ಕಾರ್ಯಕ್ರಮಗಳಿಂದ ಶಿಲ್ಪಿಗಳಲ್ಲಿ ನವೋತ್ಸಾಹ, ಶಿಲ್ಪ ರಸಿಕರಲ್ಲಿ ಶಿಲ್ಪ, ವಾಸ್ತುಶಿಲ್ಪದತ್ತ ವಿಶೇಷ ಒಲವು ಮೂಡಿದೆ ಎಂಬುದರಲ್ಲಿ ಸಂಶಯವಿಲ್ಲ.

## ಶಿಲ್ಪ ಸಾಹಿತ್ಯ

ಶಿಲ್ಪ ಕಲೆಯ ಸೊಗಸು, ವೈಶಿಷ್ಟ್ಯ, ರಸಗ್ರಹಣ, ರಸಾನಂದಕ್ಕೆ ಶಿಲ್ಪ ಸಂಬಂಧಿ ಸಾಹಿತ್ಯ ಪೂರಕ. ಈ ಹಿನ್ನೆಲೆಯಲ್ಲಿ ಅಕಾಡೆಮಿ ಶಿಲ್ಪ ಸಂಬಂಧಿ ಸಾಹಿತ್ಯವನ್ನು ಪ್ರಚುರಪಡಿಸಿತು.

ಬೆಳಕು ಕಂಡ ನಾಲ್ಕು ಮೌಲಿಕ ಗ್ರಂಥಗಳಲ್ಲಿ 'ಜಕಣಾಚಾರ್ಯ' (ಲೇ: ಸಿ.ಕೆ. ನಾಗರಾಜರಾವ್, ಸಂಗ್ರಹ: ಸರಿತಾ ಜ್ಞಾನಾನಂದ), 'ಕಲಾರಾಧನೆ' (ಮೂಲ: ಡಾ. ಕೊಂಡೂರು ವೀರರಾಘವಾಚಾರ್ಯ, ಅನು: ಸರಿತಾ ಜ್ಞಾನಾನಂದ)ಗಳು ವಿದ್ವಾಂಸರನ್ನು ಚಿಂತನೆಗೆ ಒಳಗುಪಡಿಸುವ ಕೃತಿಗಳು. ಇವೆರಡೂ ಮಹಾಶಿಲ್ಪಿ ಜಕಣಾಚಾರ್ಯರನ್ನು ಕುರಿತ ಐತಿಹಾಸಿಕ ಕಾದಂಬರಿಗಳು. ಜಕಣಾಚಾರ್ಯರು ಬಾಳಿಬದುಕಿದ್ದಕ್ಕೆ ಯಾವ ಪುರಾವೆಯೂ ಇಲ್ಲ ಎನ್ನುವ ವಾದಕ್ಕೆ ಈ ಗ್ರಂಥಗಳು ಉತ್ತರ. ಹೊಯ್ಸಳ ಶಿಲ್ಪಶೈಲಿಯ ಪ್ರಧಾನ ರೂವಾರಿ ಯಾರು? ಎಂಬುದಕ್ಕೆ ಜಕಣಾಚಾರ್ಯ ಎಂದೇ ಉತ್ತರಿಸಬೇಕಾಗುತ್ತದೆ. ಮಹಾಶಿಲ್ಪಿ, ಮಹಾಯೋಗಿ ತನ್ನ ಹೆಸರನ್ನು ಶಾಸನಗಳಲ್ಲಿ ಕಾಣಿಸಿಯಾನೆ? ಅದೂ ದೈವಸೃಷ್ಟಿಯ ಅನುಪಮ ಸೌಂದರ್ಯದ ಮುಂದೆ ಪ್ರತಿ ಸೃಷ್ಟಿಗೈಯುವ ತಾವು ಯಃಕಶ್ಚಿತ್ ಕಿರಿಗೂಸುಗಳು- ಎನ್ನುವಂತಹ ಚಿಂತಕ, ಮಹಾಶಿಲ್ಪಿ ಹೆಸರನ್ನು ಕಡೆಯುವ ಮನಸ್ಸನ್ನು ಮಾಡಿಲ್ಲ ಎಂಬುದೇ ಅರ್ಥ. ಶಾಮರಾಯಾಚಾರ್ಯರ ಅಧ್ಯಕ್ಷತೆಯ ಅವಧಿಯಲ್ಲಿ ಜಕಣಾಚಾರ್ಯರಿಗೆ ಭದ್ರಸ್ಥಾನ ಲಭಿಸಿದ್ದು ಯೋಗಾಯೋಗ. 'ಶಿಲ್ಪ ಸಂಕುಲ' (ಲೇ: ಪಿ.ಆರ್. ತಿಪ್ಪೇಸ್ವಾಮಿ) ಕರ್ನಾಟಕ ಸಾಂಪ್ರದಾಯಿಕ ಶಿಲ್ಪಿಗಳನ್ನು ಪರಿಚಯಿಸಿದರೆ, 'ಹೊಯ್ಸಳ ಚಿತ್ರ ಸಂಪುಟ' ಹೊಯ್ಸಳ ಶಿಲ್ಪಗಳ ಹತ್ತು ವರ್ಣ ಚಿತ್ರಗಳ ಸಂಪುಟ.

ಶಾಮರಾಯಾಚಾರ್ಯರ ಅಧಿಕಾರದ ಅವಧಿಯಲ್ಲಿ ಶಿಲ್ಪಿಗಳಿಗಾಗಿ ಏರ್ಪಟ್ಟ 'ತಾಲಮಾನ ಕ್ರಮ - ಪ್ರತಿಮಾ ಲಕ್ಷಣ' ವಿಚಾರ ಸಂಕಿರಣ - ಪ್ರಬಂಧ ಮಂಡನೆ ಒಂದು ವಿಶಿಷ್ಟ ಕಾರ್ಯಕ್ರಮ. ಶಿಲ್ಪಿಗಳ ಪಾಲಿಗಂತೂ ಜ್ಞಾನದೌತಣ ಎನ್ನಬೇಕು.

ತಮಿಳುನಾಡಿನ ಶಿಲ್ಪಾಚಾರ್ಯರಿಗೆ ಮಾರ್ಗದರ್ಶನ ನೀಡುವ ಗ್ರಂಥ 'ಶಿಲ್ಪರತ್ನ'.

ಕೇರಳದಲ್ಲಿ 'ತಂತ್ರ ಸಮುಚ್ಚಯ' ಪ್ರಧಾನ. ಕರ್ನಾಟಕದ ಶಿಲ್ಪಿಗಳಿಗೆ ಮಾರ್ಗದರ್ಶಕ ಗ್ರಂಥ 'ಕಾಶ್ಯಪಶಿಲ್ಪ'. ಆದರೆ, 'ಕಾಶ್ಯಪಶಿಲ್ಪ' ಗ್ರಂಥ ಅಲಭ್ಯ. ಎಲ್ಲೋ ಕತ್ತಲೆಯ ಕೋಣೆಯಲ್ಲಿ ಅಪರೂಪದ ಈ ಗ್ರಂಥ ತಾಳೆಗರಿ ರೂಪದಲ್ಲಿ ಉಳಿದಿರಬಹುದಾದ ಸ್ಥಿತಿ. ಸಾಹಿತ್ಯ ಕ್ಷೇತ್ರಮಾತ್ರವಲ್ಲ, ಶಿಲ್ಪಶಾಸ್ತ್ರ ಅಧ್ಯಯನದಲ್ಲೂ ಪ್ರಕಾಂಡ ಪಂಡಿತರಾದ ಕೆ.ಜಿ.ಎಫ್.ನ ಜಿ. ಜ್ಞಾನಾನಂದರಿಗೆ 'ಕಾಶ್ಯಪಶಿಲ್ಪ' ಗ್ರಂಥ ಸಂಪಾದನಾ ಕಾರ್ಯವನ್ನು ಒಪ್ಪಿಸಿದುದೂ ಆಯಿತು. ಮೂಲಸಂಸ್ಕೃತ, ಭಾಷಾಂತರ, ವ್ಯಾಖ್ಯೆ, ಅಸಂಖ್ಯ ಚಿತ್ರಗಳು, ಮುನ್ನುಡಿ ಸಮೇತ 'ಕಾಶ್ಯಪಶಿಲ್ಪ' ಬೃಹತ್‌ಗ್ರಂಥವಾಗಿ ರೂಪುಗೊಂಡಿತು. ಈ ಬೃಹತ್ ಗ್ರಂಥದ ಪ್ರಕಟಣಾಕಾರ್ಯದ ಬಗೆಗೆ ಅಕಾಡೆಮಿಯ ಸದಸ್ಯರೊಂದಿಗೆ ಅಧ್ಯಕ್ಷರು ಸಮಾಲೋಚನೆ ನಡೆಸಿದಾಗ ಪ್ರಕಟವಾದುದು ಮಿಶ್ರ ಪ್ರತಿಕ್ರಿಯೆ. 'ಕಾಶ್ಯಪಶಿಲ್ಪ'ದ ಮಹತ್ವ, ಅದರ ಹಿರಿಮೆ, ಕರ್ನಾಟಕ ಶಿಲ್ಪಿಗಳ ಪಾಲಿಗೆ ಅದೊಂದು ಜ್ಞಾನದೀವಿಗೆಯಾಗಬಲ್ಲ ಸಂದರ್ಭ ಎಲ್ಲದರ ಬಗೆಗೆ ಅಕಾಡೆಮಿ ಸದಸ್ಯರಲ್ಲಿ ಅಧ್ಯಕ್ಷರು ವಿಚಾರ ವಿಮರ್ಶೆ ನಡೆಸಿದ ಫಲವಾಗಿ, ಅಕಾಡೆಮಿ ಸದಸ್ಯರೇ ಒಮ್ಮತದ ಸದಭಿಪ್ರಾಯವನ್ನು ವ್ಯಕ್ತ ಪಡಿಸಿದರು. ಮಹತ್ವಪೂರ್ಣ ಬೃಹತ್ 'ಕಾಶ್ಯಪಶಿಲ್ಪ' ಗ್ರಂಥ ಶಾಮರಾಯಾಚಾರ್ಯರ ಅಧಿಕಾರಾವಧಿಯಲ್ಲಿ ಬೆಳಕಿಗೆ ಬಂದಿರುವುದು ಸ್ವತಃ ಶಾಮರಾಯಾಚಾರ್ಯರಿಗಷ್ಟೇ ಅಲ್ಲ, ಕರ್ನಾಟಕದ ಶಿಲ್ಪಾಚಾರ್ಯರಿಗೆ ಮಾತ್ರವಲ್ಲ, ಗ್ರಂಥಕರ್ತರಿಗೂ ಸಾರ್ಥಕ್ಯದ ಧನ್ಯತಾಭಾವವನ್ನು ನೀಡಿತು.

## ಸನ್ಮಾನ

ಮಹಾನ್ ಕಲಾವಿದರು ಸಮಾಜದ ಅವಜ್ಞೆಗೊಳಗಾದಾಗ ಕಲಾವಿದರ ಮಹತ್ಸಾಧನೆಯು ದಾಖಲಾಗದೆ ಕಲಾವಿದರು ಮೂಲೆಗುಂಪಾದ ಅವೆಷ್ಟೋ ದೃಷ್ಟಾಂತಗಳು ಇವೆ. ಪ್ರಜ್ಞಾವಂತರ ಸಮಾಜದಲ್ಲಿ ಇಂತಹ ಅವಗಣನೆಯ ಸಂದರ್ಭಗಳು ವಿರಳ. ಕಲಾವಿದರ ಸಾಧನೆಯ ಹೆಜ್ಜೆಗಳನ್ನು ಗುರುತಿಸಿ ಕಲಾವಿದರನ್ನು ಪುರಸ್ಕರಿಸಿ, ಸಮಾಜವು ಆನಂದದಿಂದ ಬೀಗಿ, ತನ್ನ ಉದಾತ್ತ ಮನೋಭಾವವನ್ನು ಪ್ರಕಟಿಸುತ್ತದೆ. ಈ ಪುರಸ್ಕಾರವೆಂದರೆ ಸಮಾಜವು ಕಲಾವಿದರಿಗೆ ಸಮರ್ಪಿಸುವ ಕೃತಜ್ಞತೆ. ಇದು ಸುಸಂಸ್ಕೃತ ಸಮಾಜದ ಸಲ್ಲಕ್ಷಣ ಕೂಡ.

ಶಾಮರಾಯಾಚಾರ್ಯರ ಶಿಲ್ಪ ಸಾಧನೆಯನ್ನು ಮೆಚ್ಚಿ ವಿಶ್ವಬ್ರಾಹ್ಮಣ ಸಮಾಜದ

ತಾಲ್ಲೂಕು, ಜಿಲ್ಲಾ ಮಟ್ಟದ ಹಲವಾರು ಸೇವಾ ಸಂಘಗಳು ಶಾಮರಾಯಾಚಾರ್ಯರನ್ನು ಸನ್ಮಾನಿಸಿ ತಮ್ಮ ಪ್ರೀತ್ಯಾಭಿಮಾನವನ್ನು ಪ್ರಕಟಿಸಿವೆ.

ಅವುಗಳಲ್ಲಿ ಮಂಗಳೂರಿನ ರಾಷ್ಟ್ರೀಯ ವಿಶ್ವಬ್ರಾಹ್ಮಣ ಸಮಾಜೋದ್ಧಾರಕ ಸಭಾದ ಸನ್ಮಾನ ಸ್ಮರಣೀಯ. ಸಭಾದ ಸ್ವರ್ಣಮಹೋತ್ಸವ, ರಾಜ್ಯ ವಿಶ್ವಕರ್ಮ ಸಮ್ಮೇಳನದ ಶುಭಾವಸರದಲ್ಲಿ ಶಾಮರಾಯಾಚಾರ್ಯರನ್ನು ಸನ್ಮಾನಿಸಿ ಆನಂದಪಟ್ಟರು. (1972)

ಶಾಮರಾಯಾಚಾರ್ಯರ ಪಂಚಲೋಹದ ಸಿಂಹವಾಹಿನಿ ಶ್ರೀ ತ್ರಿಭುವನೇಶ್ವರಿ ಮಾತೆಯ ವಿಗ್ರಹ ಪ್ರತಿಷ್ಠೆ ಸಮಾರಂಭ ಮುಂಬಯಿಯಲ್ಲಿ ಅದ್ದೂರಿಯಾಗಿ ಜರುಗಿದಾಗ ಶಿಲ್ಪಿ ಶಾಮರಾಯಾಚಾರ್ಯರನ್ನು ಸನ್ಮಾನಿಸಿ ಭಕ್ತವೃಂದ ಸಂತೃಪ್ತಿ ಪಡೆಯಿತು. (1977)

ವಿಜಯ ಶಿಲ್ಪಕಲಾ ಕೇಂದ್ರವು ಸ್ಥಾಪನೆಗೊಂಡ ಐದಾರು ವರ್ಷಗಳಲ್ಲೇ ಶಾಮರಾಯಾಚಾರ್ಯರ ಕೀರ್ತಿ ಕೇರಳದ ವೈನಾಡಿನ ವರದೂರಿನ ತನಕ ಹಬ್ಬಿದ ಫಲವಾಗಿ ಅಲ್ಲಿಯ ಜೈನ ಬಾಂಧವರು ಶಾಮರಾಯಾಚಾರ್ಯರಿಂದ ಬಸದಿಗಾಗಿ ಶ್ರೀಮದನಂತನಾಥ ಶ್ರೀಮೂರ್ತಿಯನ್ನು ಪಡೆದು, ಪ್ರತಿಷ್ಠಾ ಸಂದರ್ಭದಲ್ಲಿ ಶ್ರವಣಬೆಳಗೊಳದ ಶ್ರೀಮದಭಿನವ ಚಾರುಕೀರ್ತಿ ಸ್ವಾಮಿಗಳವರ ದಿವ್ಯಹಸ್ತದಿಂದ ಶಾಮರಾಯಾಚಾರ್ಯರನ್ನು ಸನ್ಮಾನಿಸಿದ್ದು ಒಂದು ಅಪೂರ್ವ ಅನುಭವ. (1977)

ವಿವಿಧ ರಂಗಗಳಲ್ಲಿ ವಿಶಿಷ್ಟ ಸಾಧನೆಗೈದ ಪ್ರತಿಭಾವಂತರಿಗೆ ಸಲ್ಲುವ ರಾಜ್ಯೋತ್ಸವ ಪ್ರಶಸ್ತಿ ಶಾಮರಾಯಾಚಾರ್ಯರ ಪಾಲಿಗೂ ಬಂದಿತು. (1985)

ಶಾಮರಾಯಾಚಾರ್ಯರ ಶಿಲ್ಪ ಸಾಧನಾಕ್ಷೇತ್ರವಾದ ಕಾರ್ಕಳದ, ವಿಶ್ವಬ್ರಾಹ್ಮಣ ಸಮಾಜೋದ್ಧಾರಕ ಸಂಘದ ಸನ್ಮಾನ ಇನ್ನೊಂದು ಸ್ಮರಣೀಯ ಸನ್ನಿವೇಶ. (1986)

ವಿಶ್ವಕರ್ಮಕುಲಜ, ಪಂಜಾಬದ ಮುಖ್ಯಮಂತ್ರಿ ಗ್ಯಾನಿ ಜೈಲ್‌ಸಿಂಗರ ಉಪಸ್ಥಿತಿಯಲ್ಲಿ ಬೆಂಗಳೂರಲ್ಲಿ ಜರುಗಿದ ಅಖಿಲ ಭಾರತ ವಿಶ್ವಕರ್ಮ ಸಮ್ಮೇಳನದಲ್ಲಿ ಶಾಮರಾಯಾಚಾರ್ಯರಿಗೂ ಸನ್ಮಾನ ವಿಶೇಷ. (1986)

ಕಾರ್ಕಳದ ಜೈನಮಠದ ನೂತನ ಪೀಠಾಧಿಕಾರಿ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಗಳವರ ಪಟ್ಟಾಭಿಷೇಕ ಮಹೋತ್ಸವವೊಂದು ವರ್ಣರಂಜಿತ ಸಮಾರಂಭ. ಏಳುಮಂದಿ ಜೈನಮಹಾಸ್ವಾಮಿಗಳವರು ಹಾಗೂ

ಜೈನಬಂಧುಗಳ ಸಮ್ಮುಖದಲ್ಲಿ ಶಾಮರಾಯಾಚಾರ್ಯರಿಗೆ ಸನ್ಮಾನ ವಿಶೇಷ. (1988)

ಮಧೂರು ಮಹಾಗಣಪತಿ ದೇವಾಲಯದ ಮಾರಾರ್ ಮಂಟಪದ ನಿರ್ಮಾಣಕ್ಕಾಗಿ ಪೇಜಾವರ ಶ್ರೀಶ್ರೀಗಳವರ ಮೂಲಕ ಚಿನ್ನದ ಪದಕದೊಂದಿಗೆ ಸನ್ಮಾನ, ಕೇರಳದ ಸುಂದರೇಶ್ವರ ದೇವಾಲಯ ನಿರ್ಮಿಸಿದ್ದಕ್ಕಾಗಿ ಚಿನ್ನದ ಪದಕದೊಂದಿಗೆ ಸನ್ಮಾನ ಇವು ಶಾಮರಾಯಾಚಾರ್ಯರ ಬದುಕಿನ ಸ್ಮರಣೀಯ ದಿನಗಳು.

ಕಲಾವಿದ ನೂರಾರು ಕೃತಿಗಳ ಕರ್ತೃವಾಗಿದ್ದರೂ, ಕಲಾವಿದನ ಕೀರ್ತಿಯನ್ನು ಚಿರಂತನವಾಗಿ ಉಳಿಸುವ ಕೃತಿಗಳು ಕೆಲವು. ಡೆಲ್ಲಿಯ ಮೆಹರೌಲಿಯಲ್ಲಿ ಪ್ರತಿಷ್ಠೆಗೊಂಡ ಹದಿಮೂರುವರೆ ಅಡಿ ಎತ್ತರದ, ಶಾಮರಾಯಾಚಾರ್ಯರಿಂದ ನಿರ್ಮಿತ ಮಹಾನ್ ಮಹಾವೀರ ಅಪೂರ್ವ ಕೃತಿ. ಶಾಮರಾಯಾಚಾರ್ಯರು ಕಡೆದ ಕೃತಿಗಳಲ್ಲೆಲ್ಲ ಬೃಹತ್ತಾದ ಕೃತಿ. ಭಗವಾನ್ ಮಹಾವೀರನ ಪ್ರತಿಷ್ಠೆಯ ದಿನದಲ್ಲಿ ಶಿಲ್ಪಿ ಶಾಮರಾಯಾಚಾರ್ಯರಿಗೆ 'ಶಿಲ್ಪಾಚಾರ್ಯ' ಎಂಬ ಬಿರುದಿನೊಂದಿಗೆ ಸಂದ ಸನ್ಮಾನ ವಿಶಿಷ್ಟ, ವಿಶೇಷ. (1990)

ಸುಂಕದಕಟ್ಟೆ ಅನ್ನಪೂರ್ಣೇಶ್ವರಿ ದೇವಸ್ಥಾನ, ಕಾರ್ಕಳ ಜೇಸಿಸ್, ಬನ್ನಂಜೆ ದೇವಾಲಯದ ಮುಖಮಂಟಪ ಮಹಾದ್ವಾರ ಉದ್ಘಾಟನಾ ಸಮಾರಂಭ, ಕಾಂತಾವರ 13 ನೇ ನಾಡಹಬ್ಬ, ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಮುಲ್ಕಿ - ಶಾಮರಾಯಾಚಾರ್ಯರಿಗೆ ಸನ್ಮಾನದ ಗೌರವ ನೀಡಿರುವ ದೇವಾಲಯ, ಸಂಸ್ಥೆ, ಸಮಾರಂಭಗಳು.

ಶಾಮರಾಯಾಚಾರ್ಯರಿಂದ ನಿರ್ಮಿಸಲ್ಪಟ್ಟ ಪ್ರತಿಮೆ, ಗರ್ಭಗುಡಿ, ದೇವಾಲಯಗಳಿಗಾಗಿ ಸಂದ ಸನ್ಮಾನದ ಗೌರವ ಹಲವು.

## ಪ್ರಶಸ್ತಿ – ಗೌರವ

ಕಲೆ ಸಂಸ್ಕೃತಿಯ ಪ್ರತೀಕ ಎನ್ನುವುದುಂಟು. ಈ ಅರ್ಥದಲ್ಲಿ ಕಲಾವಿದರು ಸಾಂಸ್ಕೃತಿಕ ರಾಯಭಾರಿಗಳು. ವಿವಿಧ ಕಲಾರಂಗದ ಮಹಾ ಸಾಧಕರನ್ನು ಗೌರವಿಸಿ ಅವರ ಸಾಧನೆಯನ್ನು ಜಗಜ್ಜಾಹಿರು ಪಡಿಸುವ ಸರಕಾರ, ಖಾಸಗಿ ಸಂಸ್ಥೆಗಳು ಈ ದೃಷ್ಟಿಯಿಂದ ಸ್ತುತ್ಯಾರ್ಹ.

ಶಿಲ್ಪ ಕಲಾರಂಗದ ಸಾಧನೆಗಾಗಿ ಸರಕಾರವು ಶಾಮರಾಯಾಚಾರ್ಯರಿಗೆ ಮಾಸಿಕ ರೂಪಾಯಿ 500ರ ಗೌರವಧನವನ್ನು ಘೋಷಿಸಿತು. (1985)

ಚಿತ್ರ, ಶಿಲ್ಪ, ಶಿಕ್ಷಣ, ಸಂಶೋಧನೆ, ಯಕ್ಷಗಾನ, ಸಂಗೀತ, ಸಾಹಿತ್ಯ ರಂಗಗಳ ಸಾಧಕರನ್ನು ಪುರಸ್ಕರಿಸುವ ಪ್ರಶಸ್ತಿ ರಾಜ್ಯೋತ್ಸವ ಪ್ರಶಸ್ತಿ. ಶಾಮರಾಯಾಚಾರ್ಯರಿಗೆ ಈ ಪ್ರಶಸ್ತಿ ಸಂದಿತು. (1991)

ಕಲಾರಂಗದ ಮಹಾಸಾಧಕರಿಗೆ ಸಲ್ಲುವ ಲಲಿತಕಲಾ ಅಕಾಡೆಮಿ ಪ್ರಶಸ್ತಿಯನ್ನು ಶಾಮರಾಯಾಚಾರ್ಯರಿಗೂ ನೀಡಿ ಸನ್ಮಾನಿಸಿತು. (1991) ಶಾಮರಾಯಾಚಾರ್ಯರಿಗೆ ಕರಕುಶಲ ಮಂಡಳಿ ಪ್ರಶಸ್ತಿ ಬಂದಿದೆ. (1995)

ದೆಹಲಿಯ ಅಖಿಲ ಭಾರತ ಕಲೆ-ಕುಶಲಕಲೆ ನಿಗಮವು ಪ್ರಶಸ್ತಿಪತ್ರ, ಬೆಳ್ಳಿಯ ಪದಕದೊಂದಿಗೆ ಶಾಮರಾಯಾಚಾರ್ಯರನ್ನು ಸನ್ಮಾನಿಸಿತು.

ಕರ್ನಾಟಕದ ಕಲೆ-ಕುಶಲಕಲೆ ನಿಗಮವು ಶಾಮರಾಯಾಚಾರ್ಯರನ್ನು ಸನ್ಮಾನಿಸಿ ಗೌರವಿಸಿತು. ಲೋಹ ಮತ್ತು ಶಿಲಾಶಿಲ್ಪ ಸಾಧನೆಗಾಗಿ ಈ ರಾಜ್ಯಪ್ರಶಸ್ತಿ. (2000)

## ಜಕಣಾಚಾರ್ಯ ಪ್ರಶಸ್ತಿ

ಜಕಣಾಚಾರ್ಯ ಪ್ರಶಸ್ತಿಯು ಕಲಾ ಪ್ರಶಸ್ತಿಗಳ ರಾಜ. ಶಿಲ್ಪಾಚಾರ್ಯರ ಜೀವಮಾನದ ಒಟ್ಟು ಸಾಧನೆಯ ಔನ್ನತ್ಯಕ್ಕಾಗಿ ಸಲ್ಲುವ ಅತ್ಯುತ್ತಮ ಗೌರವ. ಹೊಯ್ಸಳ ವಾಸ್ತುಶಿಲ್ಪ ಶೈಲಿಯ ಮಹಾನ್ ರೂವಾರಿಯ ಸ್ಮರಣೆಯೊಂದಿಗೆ ನೀಡುವ ಪ್ರಶಸ್ತಿ. ಶಿಲ್ಪಿಗಳ ಮಹಾಸಾಧನೆಗಾಗಿ ನೀಡುವ ಇಂತಹ ಪ್ರಶಸ್ತಿ ಭಾರತದಲ್ಲೇ ಬೇರೊಂದಿಲ್ಲ. 'ಹುಟ್ಟಿದರೆ ಕನ್ನಡನಾಡಿನಲ್ಲಿ ಶಿಲ್ಪಿಯಾಗಿ ಹುಟ್ಟಬೇಕು' ಎಂದು ಪ್ರಾರ್ಥಿಸುವಂತಹ ಹಿರಿದಾದ ಪ್ರಶಸ್ತಿ. ಈ ಪ್ರಶಸ್ತಿಯ ಕಲ್ಪನೆ, ಸ್ಥಾಪನೆಯಲ್ಲಿ ಅಂದಿನ ಮುಖ್ಯಮಂತ್ರಿ ವೀರಪ್ಪಮೊಯ್ಲಿಯವರ ಸಲಹೆ-ಸೂಚನೆ ಹಿರಿದಾದ್ದು ಎಂಬುದನ್ನು ಗ್ರಹಿಸಿದಾಗ ಶಿಲ್ಪಿಗಳೆಲ್ಲ ಗೌರವದಿಂದ ತಲೆಬಾಗುವಂತಾಗುತ್ತದೆ. ಸರಕಾರಕ್ಕೂ ನಮನ ಸಲ್ಲಬೇಕು.

ಶಿಲ್ಪ, ವಾಸ್ತುಶಿಲ್ಪ ಸೃಷ್ಟಿ, ಶಿಲ್ಪಶಾಸ್ತ್ರ ಪಾಂಡಿತ್ಯ, ಶಿಲ್ಪಕಲಾ ಅಕಾಡೆಮಿಯ ಪ್ರಥಮ ಅಧ್ಯಕ್ಷರಾಗಿ ಶಿಲ್ಪ ಜ್ಞಾನದ ಅಭಿವೃದ್ಧಿಗಾಗಿ ಕಾರ್ಯಗತಗೊಳಿಸಿದ ಯೋಜನೆಗಳು ಈ ಎಲ್ಲ ಸಾಧನೆಗಾಗಿ ಅತ್ಯುನ್ನತ ಗೌರವದ ಜಕಣಾಚಾರ್ಯ ಪ್ರಶಸ್ತಿಯು ಶಾಮರಾಯಾಚಾರ್ಯರ ಮಡಿಲಿಗೆ ಬಂದು, ಶಾಮರಾಯಾಚಾರ್ಯರ ಶಿಲ್ಪಲೋಕದತ್ತ ಬೆಳಕನ್ನು ಚೆಲ್ಲಿತು. ಶಾಮರಾಯಾಚಾರ್ಯರಲ್ಲಿ ತಮ್ಮ ಶಿಲ್ಪನಿಷ್ಠೆ, ಸಾಧನೆಗಳಿಗಾಗಿ ಸಂದ ಈ ಪರಮ ಗೌರವಕ್ಕಾಗಿ ಸಾಫಲ್ಯದ ಸಂತೃಪ್ತಿ ಆನಂದ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕಲಾವಿದರು, ಕಲಾಪ್ರೇಮಿಗಳು, ವಿದ್ವಾಂಸರ ಮಹಾಕೂಟದಲ್ಲಿ ಉಲ್ಲಾಸಜನಕ ಸನ್ನಿವೇಶದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ರಾಣಿ ಸತೀಶ್ ಇವರ ಘನ ಅಧ್ಯಕ್ಷತೆಯಲ್ಲಿ, 1999ರ ಸಾಲಿನ ಜಕಣಾಚಾರ್ಯ ಪ್ರಶಸ್ತಿಯನ್ನು, (ಮಾರ್ಚಿ 9, 2000) ಶಾಮರಾಯಾಚಾರ್ಯರಿಗೆ ನೀಡಿ ಪುರಸ್ಕರಿಸಲಾಯಿತು.

## ಶಿಲ್ಪಶಾಸ್ತ್ರ ಪಾಠಶಾಲೆ

ಶಿಲ್ಪಸೃಷ್ಟಿಗೆ ಶಿಲ್ಪಶಾಸ್ತ್ರವೇ ಪಂಚಾಂಗ. ಶಿಲ್ಪಶಾಸ್ತ್ರಾಧ್ಯಯನ ಶಿಲ್ಪ, ವಾಸ್ತುಶಿಲ್ಪಕ್ಕೆ ಪುಷ್ಟಿ. ಅದರಿಂದಲೇ ಶಿಲ್ಪ ಪ್ರೇಮಿಗಳು, ಭಕ್ತರಿಗೆ ಸಂತುಷ್ಟಿ-ಎಂಬುದನ್ನು ಗ್ರಹಿಸಿದ್ದ ಶಾಮರಾಯಾಚಾರ್ಯರು ಶಿಲ್ಪ ಶಾಸ್ತ್ರಪಾಠ ಶಾಲೆಯ ಕೊರತೆಯನ್ನು ಮನಗಂಡು ತಾವೇ ಶಿಲ್ಪಶಾಸ್ತ್ರ ಪಾಠಶಾಲೆಯ ಸ್ಥಾಪನೆಗೆ ಮುಂದಾದುದು ಒಂದು ಸಂದರ್ಭ. ಬಹುದಿನಗಳಿಂದ ಶಿಲ್ಪಶಾಸ್ತ್ರ ಪಾಠಶಾಲೆಯ ಕಲ್ಪನೆ ಶಾಮಾರಾಯಾಚಾರ್ಯರಲ್ಲಿದ್ದರೂ ಅದು ಕಾರ್ಯಗತಗೊಳ್ಳದೇ ಉಳಿದಿತ್ತು.

ಜಕಣಾಚಾರ್ಯ ಪ್ರಶಸ್ತಿಯೊಂದಿಗೆ ಒಂದು ಲಕ್ಷರೂಪಾಯಿಗಳ ನಿಧಿ ಕೈ ಸೇರಿದಾಗ 'ಇದೇ ತಕ್ಕ ಕಾಲ' ಎಂಬ ನಿರ್ಧಾರಕ್ಕೆ ಬಂದ ಶಾಮರಾಯಾಚಾರ್ಯರು, ಲಕ್ಷವನ್ನು 'ನಿಧಿ'ಯಾಗಿ ಇರಿಸಿ, ಅದರ ಬಡ್ಡಿ ಶಿಲ್ಪಶಾಸ್ತ್ರ ಪಾಠಶಾಲೆಗೆ ಸಲ್ಲುವ ವ್ಯವಸ್ಥೆ ಮಾಡಿ, ಸದ್ಯ ತಾವೇ ಶಿಲ್ಪಶಾಸ್ತ್ರ ಪಾಠಶಾಲೆಯಲ್ಲಿ ಶಿಲ್ಪಶಾಸ್ತ್ರ ಪಾಠವನ್ನು ನಿರ್ವಹಿಸುತ್ತಿದ್ದಾರೆ. ಹತ್ತು ವಿದ್ಯಾರ್ಥಿಗಳು ಶಿಲ್ಪಶಾಸ್ತ್ರ ಅಧ್ಯಯನದಲ್ಲಿ ನಿರತರಾಗಿದ್ದಾರೆ.

## ಕಲಾ ಪ್ರದರ್ಶನಗಳು

ಕಲಾವಿದರ ಕೃತಿಗಳು ಸಾರ್ವಜನಿಕ ಪ್ರದರ್ಶನಗಳಲ್ಲಿ ಭಾಗವಹಿಸುವುದರಿಂದ ಕಲಾವಿದರ ಪರಸ್ಪರ ಮಿಲನ, ಪರಿಚಯ, ಕಲಾರಸಿಕರ ಪ್ರೋತ್ಸಾಹಗಳಿಗೆ ನಾಂದಿಯಾಗುತ್ತದೆ. ಕಲಾವಿದರ ಅನುಭವ ವಿಸ್ತಾರಕ್ಕೂ ಲಾಭ.

ಶಾಮರಾಯಾಚಾರ್ಯರು ಸಾಕಷ್ಟು ಶಿಲ್ಪಕಲಾ ಪ್ರದರ್ಶನಗಳಲ್ಲಿ ತಮ್ಮ ಕೃತಿಗಳೊಂದಿಗೆ ಭಾಗವಹಿಸಿ ಅನುಭವದ ಮೇರೆಯನ್ನು ವಿಸ್ತರಿಸಿಕೊಂಡವರು.

ಬೆಂಗಳೂರಿನ ಅಖಿಲ ಭಾರತ ಕರಕುಶಲ ನಿಗಮ, ಅಹಮದಾಬಾದಿನ ಗುರ್ಜಾರಿ ಕರಕುಶಲ ನಿಗಮ, ಕಲ್ಕತ್ತಾದ ಬಂಗಾಳ ಗುಡಿ ಕೈಗಾರಿಕಾ ಸಂಸ್ಥೆ, ಹೈದರಾಬಾದಿನ

ಲೇಪಾಕ್ಷಿ ಕರಕುಶಲ ನಿಗಮಗಳು ವ್ಯವಸ್ಥೆಗೊಳಿಸಿದ ಶಿಲ್ಪ ಪ್ರದರ್ಶನಗಳು, ಶಾಮರಾಯಾಚಾರ್ಯರು ಶಿಲ್ಪ ಕೃತಿಗಳೊಂದಿಗೆ ಭಾಗವಹಿಸಿದ ಪ್ರಮುಖ ಶಿಲ್ಪ ಪ್ರದರ್ಶನಗಳು.

## ಪ್ರಸಾರ ಮಾಧ್ಯಮ

ಪ್ರಸಾರ ಮಾಧ್ಯಮಗಳಲ್ಲಿ ಪ್ರಮುಖವಾಗಿ ಪತ್ರಿಕಾ ಮಾಧ್ಯಮ ವೈಚಾರಿಕ, ವೈಜ್ಞಾನಿಕ ಜ್ಞಾನ ಪ್ರಸಾರದಿಂದ ವಿಶ್ವವನ್ನೇ ಒಂದು ಬೃಹತ್ ಗೃಹವೆಂಬ ಭಾವನೆಯನ್ನು ಜನಮನದಲ್ಲಿ ಮೂಡಿಸಿರುವುದು ಸತ್ಯ. ಕಲಾ ಪ್ರಸಾರದಲ್ಲೂ ಪತ್ರಿಕಾ ಮಾಧ್ಯಮದ ಕಾರ್ಯ ಘನತರ. ಕಲಾವಿದರ ಶ್ರೇಯಸ್ಸಿನಲ್ಲಿ ಪತ್ರಿಕಾ ಮಾಧ್ಯದ ಪಾತ್ರ ಹಿರಿದು. ಶಾಮರಾಯಾಚಾರ್ಯರ ಬದುಕಿನುದ್ದಕ್ಕೂ ಅವರ ಶಿಲ್ಪ ಸಾಧನೆಯನ್ನು ಹಂತ ಹಂತವಾಗಿ ಪ್ರಚುರ ಪಡಿಸುವಲ್ಲಿ ಪತ್ರಿಕಾ ಮಾಧ್ಯಮ ವಿಶೇಷ ಕಾಳಜಿಯನ್ನು ವಹಿಸಿಕೊಂಡುದು ಸ್ತುತ್ಯಾರ್ಹ.

ಉದಯವಾಣಿ, ಹೊಸದಿಗಂತ, ಮುಂಗಾರು, ಸುಧಾ, ಟೈಮ್ಸ್ ಆಫ್ ಇಂಡಿಯಾ, ದಿ ಹಿಂದು, ದೀ ವೀಕ್, ಮಿಡ್-ಡೇ, ಈವ್ನಿಂಗ್ ನ್ಯೂಸ್, ದಿ ಹಿಂದುಸ್ಥಾನ್ ಟೈಮ್ಸ್, ನವಭಾರತ ಟೈಮ್ಸ್ (ಹಿಂದಿ) ಜನಸತ್ತಾ (ಹಿಂದಿ) ಮಾತೃಭೂಮಿ (ಮಲಯಾಳ) ಪತ್ರಿಕೆಗಳು ಈ ಮಹಾಕಾರ್ಯದಲ್ಲಿ ಪಾಲುಗೊಂಡವು.

## ಕೃತಜ್ಞತೆ ಸಮರ್ಪಣೆ

ನದಿ ದಾಟಿದ ಮೇಲೆ ಅಂಬಿಗನ ಹಂಗೇನು? ಈ ಮನೋಭಾವ ಪ್ರಚಲಿತ ದಿನಗಳಲ್ಲಿ ಸರ್ವೇಸಾಮಾನ್ಯ. ಆದರೆ, ಶಾಮರಾಯಾಚಾರ್ಯರಲ್ಲಿ ತಮ್ಮ ಜೀವನಯಾನದಲ್ಲಿ, ತಮ್ಮ ಶ್ರೇಯಸ್ಸಿಗಾಗಿ ಮನಸಾ ಶ್ರಮವಹಿಸಿರುವ ಮಹಾ ಹೃದಯವಂತರನ್ನು ಪದೇ ಪದೇ ಸ್ಮರಿಸಿಕೊಳ್ಳುವ ಔದಾರ್ಯ.

ಸುಪ್ರಸಿದ್ಧ ಶಿಲ್ಪಿ ರಂಜಾಳ ಗೋಪಾಲ ಶೆಣೈಯವರು ತಮ್ಮ ಶಿಲ್ಪ ಪ್ರತಿಭೆಗೆ ಪ್ರೋತ್ಸಾಹದ ಹಸ್ತ ನೀಡಿದ್ದರಿಂದಲೇ ಈ ಕಲಾರಂಗದಲ್ಲಿ ಮಹಾಸಾಧನೆ ಮಾಡುವ ಧೈರ್ಯ, ಸ್ಥೈರ್ಯ ತುಂಬಿತು ಎಂಬುದನ್ನು ಸ್ಮರಿಸಿಕೊಳ್ಳಲು ಶಾಮರಾಯಾಚಾರ್ಯರು ಹೆಮ್ಮೆ ಪಡುತ್ತಾರೆ.

ವಾಸ್ತುಶಾಸ್ತ್ರಜ್ಞ ಮುನಿಯಂಗಳ ಕೃಷ್ಣ ಭಟ್ಟರು ತಮ್ಮ ಪ್ರಥಮ 'ಗೈಡ್' ಎಂಬುದನ್ನು ಶಾಮರಾಯಾಚಾರ್ಯರು ಮರೆತಿಲ್ಲ.

ಸಂಸ್ಕೃತ ವಿದ್ವಾನ್ ದೇವದಾಸ ಶರ್ಮರು ತಮಗೆ ಶಿಲ್ಪಶಾಸ್ತ್ರದಲ್ಲಿಯ ರಹಸ್ಯವನ್ನು ತಿಳಿಹೇಳಿದ್ದರಿಂದ ತಮ್ಮ ಶಿಲ್ಪದಲ್ಲಿ ಶಕ್ತಿ, ಸೌಂದರ್ಯ, ಓಜಸ್ಸುಗಳ ಸಂಗಮವಾಯಿತು, ಶಾಮರಾಯಾಚಾರ್ಯರ ಮಧುರ ನೆನಪು. ಶಿಲ್ಪ, ಶಿಲ್ಪಶಾಸ್ತ್ರ ಎಂದೊಡನೆ ಶಾಮರಾಯಾಚಾರ್ಯರಿಗೆ ತಟ್ಟನೆ ದೇವದಾಸ ಶರ್ಮರ ಸ್ಮರಣೆ. ಜೊತೆಗೆ ಸಂತೃಪ್ತಭಾವ.

ಶಿಲ್ಪಕಲೆಯನ್ನು ನೆಚ್ಚಿದರೆ ಸ್ವತಂತ್ರ ಜೀವನ ಅಸಾಧ್ಯ ಎನ್ನುವ ಕಾಲಘಟ್ಟದಲ್ಲಿ ಶಾಮರಾಯಾಚಾರ್ಯರು ಶಿಲ್ಪ ಕಲಾರಂಗಕ್ಕೆ ಅಡಿಯಿಟ್ಟವರು. ಪಾಲ್ಕೆ ಬಾಬುರಾಯಾಚಾರ್ಯರು ಮಹಾದಾನಿಗಳಷ್ಟೇ ಅಲ್ಲ, ಸಾಹಿತ್ಯ, ಕಲಾಪೋಷಕರೂ ಕೂಡ. ಪಾಲ್ಕೆ ಬಾಬುರಾಯಾಚಾರ್ಯರು, ಶಾಮರಾಯಾಚಾರ್ಯರ ಪರಸ್ಪರ ಭೇಟಿಯ ಸಂದರ್ಭದಲ್ಲಿ ಪಾಲ್ಕೆ ಬಾಬುರಾಯಾಚಾರ್ಯರು, ಶಾಮರಾಯಾಚಾರ್ಯರ ಶಿಲ್ಪಸಾಧನೆಯ ಕುರಿತು ವಿಚಾರಿಸಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲ, ಮಹಾಶಿಲ್ಪಿಗಳು ಆಗಿಹೋದ ತಮ್ಮ ಸಮಾಜದಲ್ಲಿ ಶಿಲ್ಪಿಗಳ ಸಂಖ್ಯೆ ತೀರಾ ಕ್ಷೀಣಿಸುತ್ತಿರುವ ಕಹಿ ಸತ್ಯವನ್ನು ಸ್ಮರಿಸಿಕೊಳ್ಳುವ ಪಾಲ್ಕೆ ಬಾಬುರಾಯಾಚಾರ್ಯರು, ಶಾಮರಾಯಾಚಾರ್ಯರಲ್ಲಿ 'ಶಿಲ್ಪ ವಿದ್ಯೆಯನ್ನು ಮುಂದುವರಿಸಿ. ನಮ್ಮ ಸಮಾಜದಲ್ಲಿ ಶಿಲ್ಪಿಗಳೇ ಕಡಿಮೆ' ಎಂದು ಆಡುತ್ತಿದ್ದುದೇ ಅಲ್ಲದೆ, ಒಮ್ಮೆ ಮುನ್ನೂರು ರೂಪಾಯಿಗಳ ಮೊತ್ತವನ್ನು (ಈ ಕಾಲಕ್ಕೆ ಆ ಮೊತ್ತದ ಮೌಲ್ಯ ಹಿರಿದಾದುದೇ) ಶಾಮರಾಯಾಚಾರ್ಯರ ಕೈಯಲ್ಲಿ ತುರುಕಿದ್ದುದನ್ನು ತಮ್ಮ ವಿಶೇಷ ಸಾಧನೆಗೆ ಮೂಲ ಪ್ರೇರಣೆ ಇದು - ಎಂದು ಪಾಲ್ಕೆ ಬಾಬುರಾಯಾಚಾರ್ಯರನ್ನು ಮನದುಂಬಿ ಸ್ಮರಿಸಿಕೊಳ್ಳುತ್ತಾರೆ ಶಾಮರಾಯಾಚಾರ್ಯರು.

## ಶಿಲ್ಪ ಕಲಾಲೋಕ

ಶಾಮರಾಯಾಚಾರ್ಯರ ವೈವಿಧ್ಯಮಯ ಶಿಲ್ಪ ಕಲಾಲೋಕದ ಅವಲೋಕನದ ಪರಿಣಾಮ ಅನಿರ್ವಚನೀಯ ಆನಂದ.

ಬುದ್ಧ - ಧ್ಯಾನಮಗ್ನ ಬುದ್ಧ. ಶಾಂತಿ, ಆನಂದದ ಮಹಾಮೂರ್ತಿ. ಭಕ್ತರಲ್ಲೂ ಇದೇ ಅನುಭವ. (ಕೃಷ್ಣಶಿಲೆ - ಎತ್ತರ ಹತ್ತು ಇಂಚುಗಳು.)

ವೇಣುಗೋಪಾಲ - ನಾದಲೋಲ ವೇಣುಗೋಪಾಲ. ನಾದದಲ್ಲಿ ತಲ್ಲೀನ ಗೋಪಾಲ. ಹೊಯ್ಸಳ ಶೈಲಿಯ ಈ ಕೃತಿಯಲ್ಲಿ ಆಭರಣ, ಅಲಂಕಾರಗಳು ಕೃತಿಯ

ವಿಶೇಷ. ಭಾವಮಧುರ, ಭಂಗಿ ಸುಲಲಿತ. (ಲಂಡನ್ ಕಲಾ ಸಂಗ್ರಹಾಲಯದಲ್ಲಿದೆ. ಎತ್ತರ $1\frac{1}{2}$ ಅಡಿಗಳು) ಕೈ, ಕಾಲುಗಳು ಬಳೆಗಳು ಅತ್ತಿತ್ತ ಚಲಿಸುತ್ತವೆ.

ವಿಶ್ವಕರ್ಮ - ವೇದ ಪ್ರತಿಪಾದಿತ ವಿಶ್ವವನ್ನು ಸೃಷ್ಟಿಸಿ ಸರ್ವವಸ್ತು (ಅಣು-ಪರಮಾಣು ರೂಪದಲ್ಲೂ) ಜೀವರಾಶಿಗಳಲ್ಲಿ ಪ್ರವೇಶಿಸಿ ಕರ್ಮ ಚೈತನ್ಯವಾಗಿ ಉಳಿದ ನಿರ್ಗುಣ-ನಿರಾಕಾರ ವಿಶ್ವಕರ್ಮನ ಸಾಕಾರರೂಪ. ಪಂಚವದನ, ದಶಬಾಹು ಸಮನ್ವಿತ ಧ್ಯಾನಸ್ಥ, ಯೋಗಮುದ್ರೆ, ಪ್ರಶಾಂತವದನ. (ಕೃಷ್ಣಶಿಲೆ - ಎತ್ತರ 2 ಅಡಿಗಳು. ಕುಂಬಳೆ ಆರಿಕ್ಕಾಡಿ ದೇವಸ್ಥಾನದಲ್ಲಿ ಪ್ರತಿಷ್ಠೆಗೊಂಡು ಪೂಜೆಗೊಳ್ಳುತ್ತಿರುವ ವಿಗ್ರಹ.)

ಗಣಪತಿ - ಮೋದಕಪ್ರಿಯ, ಪ್ರಸನ್ನ ಗಣಪತಿ. (ಕೃಷ್ಣಶಿಲೆ - ಎತ್ತರ 2 ಅಡಿಗಳು. ಆರಿಕ್ಕಾಡಿ ದೇವಸ್ಥಾನದಲ್ಲಿ ಪೂಜೆಗೊಳ್ಳುತ್ತಿರುವ ವಿಗ್ರಹ)

ಸರಸ್ವತಿ - ಅಭಯ, ವರದ ಹಸ್ತಶೋಭಿತೆ, ಪಾಶಾಂಕುಶ ಧರೆ, ಸಿದ್ಧಾಸನೆ. ಚಂಚಲ ಮನಸ್ಸಿಗೆ ಸ್ಥಿರತೆಯ ಸಂದೇಶ (ಕೃಷ್ಣಶಿಲೆ - ಎತ್ತರ ಹತ್ತು ಇಂಚುಗಳು ಶಿಲ್ಪಿಗಳ ಸಂಗ್ರಹದಲ್ಲಿದೆ.)

ಪದ್ಮಾವತಿ - ಕಮಲ, ಫಲ, ಪಾಶಾಂಕುಶಧಾರಿ, ಕುಂಡಲಿನಿ ಶಕ್ತಿಯ ಪ್ರತೀಕ. ಪಂಚಹೆಡೆಗಳ ನಾಗ. ಕೋಳಿಯ ದೇಹ, ನಾಗಶಿರದ ಕುಕ್ಕುಟೋರಗ ವಾಹನ. (ಕೃಷ್ಣಶಿಲೆ - ಎತ್ತರ ಹದಿನೆಂಟು ಇಂಚುಗಳು - ಜಪಾನ್ ಸಂಗ್ರಹಾಲಯದಲ್ಲಿದೆ.)

ನವದುರ್ಗೆ - ನವದುರ್ಗೆಯರಲ್ಲಿ ಮಂದಸ್ಮಿತೆ, ಸಿಂಹವಾಹಿನಿ. (ಕೃಷ್ಣಶಿಲೆ - $3\frac{1}{2}$ ಅಡಿಗಳು ಕೊಡ್ಯಡ್ಕ ಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ಪ್ರತಿಷ್ಠೆಗೊಂಡ ವಿಗ್ರಹ.)

ಶಿವ - ದ್ವಿಭುಜ, ಡಮರು, ತ್ರಿಶೂಲ, ಜಟಾಧಾರಿ, ಕಟಿಯಲ್ಲಿ ನಾಗಾಲಂಕಾರ, ಶಾಂತಮುಖ ಮುದ್ರೆ. (ಕೃಷ್ಣಶಿಲೆ - ಎತ್ತರ 4 ಅಡಿಗಳು. ಇಟಲಿಯ ಕಲಾ ಸಂಗ್ರಹಾಲಯದಲ್ಲಿದೆ.)

ಮುಕುರ ಮೋಹಿನಿ - ಹೊಯ್ಸಳ ಶೈಲಿ, ಭಂಗಿ, ಭಾವಗಳು ವಿಶಿಷ್ಟವಾದುದು. ರಾಷ್ಟ್ರಮಟ್ಟದ ಪ್ರಶಸ್ತಿ ವಿಜೇತ ಕೃತಿ. (ಕೃಷ್ಣಶಿಲೆ - ಎತ್ತರ 1 ಅಡಿ. ಶಿಲ್ಪಿಗಳ ಕಲಾಸಂಗ್ರಹದಲ್ಲಿದೆ.)

ಹನುಮಾನ್ - ಅಭಯಹಸ್ತ, ಗಧಾಧರ, ದೃಢನಿಲುವು, ಶಕ್ತಿಮಾನ್ ಹನುಮಾನ್. (ಕೃಷ್ಣಶಿಲೆ - ಎತ್ತರ 3 ಅಡಿಗಳು. ಮುಂಬಯಿಯಲ್ಲಿ ಪ್ರತಿಷ್ಠೆಗೊಂಡಿದೆ.)

ಕುರುಬ - ಸಮಕಾಲೀನ ಜೀವನ ಚಿತ್ರಣದ ಮಾದರಿ ಕೃತಿ. ತಲೆಗೆ ಬಟ್ಟೆಯ ಮುಂಡಾಸು. ಬರಿದು ಮೈಯನ್ನು ಸುತ್ತುವರಿದ ಬಟ್ಟೆ. ಊರು ಗೋಲನ್ನು ಬಿಗಿಹಿಡಿದ ಕುರುಬನಲ್ಲಿ ಗ್ರಾಮೀಣ ಜೀವನದ ಸೊಗಸು. ಬಹುಶ್ರದ್ಧೆ, ಕುತೂಹಲಗಳಿಂದ ಕುರಿಮಂದೆಯನ್ನು ಕಾಯುವ ಮನೋಭಾವ. ತನ್ನ ಬಳಿ ಕುರಿಯಿದ್ದರೂ, ದೂರದ ಕುರಿಗಳನ್ನು ಕಾಯುವ ಏಕಾಗ್ರತೆ. ಇವು ಕೃತಿಯ ಒಟ್ಟಂದ. (ಕೃಷ್ಣಶಿಲೆ - ಎತ್ತರ 1 ಅಡಿ. ಶಿಲ್ಪಿಗಳ ಸಂಗ್ರಹಾಲಯದಲ್ಲಿದೆ.)

ಹಾವಾಡಿಗ - ರಾಘವಾಂಕನ ಹರಿಶ್ಚಂದ್ರ ಕಾವ್ಯದ 'ಬೋಂಕನೆ' ಪದವನ್ನು ನೆನಪಿಸುವ, ಪುಂಗಿಯ ನಾದಕ್ಕೆ ತಲೆದೂಗುವ ನಾಗ. ಇದು ದಿನನಿತ್ಯದ ಆಟ ಎಂಬ ನಿರ್ಲಿಪ್ತತೆಯಿಂದ ಪುಂಗಿಯೂದುವ ಹಾವಾಡಿಗ. ಮುಂಡಾಸು ಧರಿಸಿದ ಬಟ್ಟೆ, ದಪ್ಪ ಪಾದರಕ್ಷೆ - ಇವೆಲ್ಲವೂ ಹಾವಾಡಿಗನ ಬದುಕನ್ನು ಕಣ್ಣಿಗೆ ಕಟ್ಟುತ್ತದೆ. (ಕೃಷ್ಣಶಿಲೆ - ಎತ್ತರ 8 ಇಂಚುಗಳು. ಶಿಲ್ಪಿಗಳ ಸಂಗ್ರಹಾಲಯದಲ್ಲಿದೆ.)

ವೇಣುಗೋಪಾಲ - ಹೊಯ್ಸಳ ಶೈಲಿ. ವಿಶಿಷ್ಟಭಾವ ಭಂಗಿ. (ಕೃಷ್ಣಶಿಲೆ - ಎತ್ತರ 2 ಅಡಿಗಳು. ದೇವಸ್ಥಾನದಲ್ಲಿ ಪ್ರತಿಷ್ಠೆಗೊಂಡ ಕೃತಿ.)

ಮಹಾವೀರ - ದೆಲ್ಲಿಯ ಮಹರೌಲಿಯ ಅಹಿಂಸಾ ಸ್ಥಳದಲ್ಲಿ ಪ್ರತಿಷ್ಠೆಗೊಂಡು ಮಹಾಭಿಷೇಕಗೊಳ್ಳುತ್ತಿರುವ ಭಗವಾನ್ ಮಹಾವೀರ. ಸಹನೆ, ಶಾಂತಿಯ ಪ್ರತೀಕ. ಧ್ಯಾನಸ್ಥ ಮಹಾವೀರ.

## ಇವರೇ ಶಾಮರಾಯಾಚಾರ್ಯರು

ವಿಭೂತಿಧಾರಿ, ಶುದ್ಧ ಶ್ವೇತವರ್ಣದ ಅಡ್ಡಪಂಚೆ, ನೀಳಕೈ ಪೈರಾನ್, ಶಾಲಿನಿಂದ ಅಲಂಕೃತ, ತೆಳುದೇಹ, ಅಚ್ಚ ಬಿಳಿಗೂದಲು, ನಗುಮುಖ, ಸಾಮಾನ್ಯ ಎತ್ತರದ ಶಾಮರಾಯಾಚಾರ್ಯರನ್ನು ಒಬ್ಬ ಶಿಲ್ಪಿ ಎಂದೋ, ಶಿಲ್ಪಿಶಾಸ್ತ್ರಜ್ಞನೆಂದೋ ಪ್ರಥಮ ಭೇಟಿಯಲ್ಲಿ ಗುರುತಿಸುವುದು ಕಷ್ಟ. ಶಾಮರಾಯಾಚಾರ್ಯರು ಮಾತಿಗೆ ತೊಡಗಿದಾಗ ಅವರ ನಯವಿನಯ, ನಿಷ್ಕಲಂಕ ಮಾತುಗಳನ್ನು ಆಲಿಸಿದಾಗ ಒಬ್ಬರು ಸಾಮಾನ್ಯ 'ಅಜ್ಜ' ಎಂದಷ್ಟೇ ಭಾಸವಾಗುವುದು ಸಹಜ. ಶಿಲ್ಪ, ವಾಸ್ತುಶಿಲ್ಪ ಸಂಬಂಧಿ ಪ್ರಶ್ನೆಗಳಿಂದ ಶಾಮರಾಯಾಚಾರ್ಯರನ್ನು ಮಾತಿಗೆಳೆದಾಗ ಪುಂಖಾನುಪುಂಖವಾಗಿ, ಅಷ್ಟೇ ನಿರರ್ಗಳವಾಗಿ ಪ್ರವಹಿಸಿ ಬರುವ, ಶಿಲ್ಪ-ವಾಸ್ತುಶಿಲ್ಪದ ಹಿರಿಮೆ-ಗರಿಮೆಗಳ ಬಗೆಗಿನ ಅವರ ಪಾಂಡಿತ್ಯಪೂರ್ಣ ವಾಕ್ಸರಣಿಗೆ ಮೂಖರಾಗುವ ಸಂಭವ. ಅಲ್ಲಲ್ಲಿ ಶಿಲ್ಪಶಾಸ್ತ್ರದ

ಆಧಾರಗಳು, ಶುದ್ಧವಿಚಾರದ ಸಂಸ್ಕೃತ ಶ್ಲೋಕಗಳು- ಇವೆಲ್ಲವುಗಳಿಂದ ಶಾಮರಾಯಾಚಾರ್ಯರ ವಿದ್ವತ್ತಿನ ಆಳ-ಅಗಲಗಳ ದರ್ಶನವಾಗಿ ಮಹಾನ್ ಪ್ರಾಚೀನ ಶಿಲ್ಪಿಗಳ ಸ್ಮರಣೆಯೊಂದಿಗೆ, ಪೂಜ್ಯಭಾವವೊಂದು ತಲೆ ಎತ್ತುತ್ತದೆ.

ವಿಶಾಲ ಸಮಾಜದ ಶಿಲ್ಪ ಶ್ರದ್ಧೆಯನ್ನು ಮನಮೆಚ್ಚಿ ನುಡಿಯುವ ಶಾಮರಾಯಾಚಾರ್ಯರು, ಶಿಲ್ಪಿಗಳು ಶಿಲ್ಪದೊಂದಿಗೆ ಶಿಲ್ಪಶಾಸ್ತ್ರಾಧ್ಯಯನಕ್ಕೂ ಅತಿ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಬೇಕಾದ ಔಚಿತ್ಯವನ್ನು ಶಾಸ್ತ್ರ ಪ್ರಮಾಣದಿಂದ ವರ್ಣಿಸುತ್ತಾರೆ. ಇಲ್ಲಿ ಸ್ಮರಣೀಯ ಅಂಶವೆಂದರೆ ಶಾಮರಾಯಾಚಾರ್ಯರು ಹಾಸ್ಯ ಪ್ರೇಮಿಗಳು. ಅವರ ಮಾತಿನಲ್ಲಿ ಹಾಸ್ಯಕ್ಕೂ ಸ್ಥಾನ.

ಬಾದಾಮಿ, ಐಹೊಳೆ, ಹಂಪಿ, ಬೇಲೂರು, ಹಳೆಬೀಡು, ಸೋಮನಾಥಪುರಗಳಂತಹ ವಿಶ್ವವಿಖ್ಯಾತ ದೇವಾಲಯಗಳನ್ನು ನಿರ್ಮಿಸಿ, ಭಾರತೀಯ ಸಂಸ್ಕೃತಿ, ಧರ್ಮಗಳಿಗೆ ವಿಶಿಷ್ಟ ಕೊಡುಗೆ ನೀಡಿರುವ ವಿಶ್ವಬ್ರಾಹ್ಮಣ ಶಿಲ್ಪಿಗಳ ಸಂತಾನದ ಜವಾಬ್ದಾರಿ ಆಧುನಿಕ ಕಾಲದಲ್ಲಿ ಮತ್ತೂ ಹೆಚ್ಚಿದೆ. ಭಾರತೀಯ ಶಿಲ್ಪಿಗಳಿಂದ ದೇಶ, ವಿದೇಶಗಳಲ್ಲಿ ನಿರ್ಮಿತ ಪ್ರಾಚೀನ ದೇವಾಲಯಗಳು ಜೀರ್ಣಾವಸ್ಥೆಯಲ್ಲಿವೆ. ಈ ಸಾಂಪ್ರದಾಯಿಕ ಶಿಲ್ಪಿಗಳ ನೆರವಿನಿಂದ ಈ ದೇವಾಲಯಗಳ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ. ಈ ಶಿಲ್ಪ ಸಂಪತ್ತಿನ ರಕ್ಷಣೆ ಇಂದಿನ ಅಗತ್ಯ - ಎಂಬುದು ಶಾಮರಾಯಾಚಾರ್ಯರ ಕಳಕಳಿ.

ಪಕ್ಕದ ರಾಜ್ಯಗಳಲ್ಲಿ ಸರಕಾರವೇ ಶಿಲ್ಪ ಮಹಾವಿದ್ಯಾಲಯಗಳನ್ನು ನಡೆಸುತ್ತಿದ್ದರೆ, ಕರ್ನಾಟಕದಲ್ಲಿ ಶಿಲ್ಪ ತರಬೇತಿ, ಸಾಧನೆಗೆ ಯಾವ ವ್ಯವಸ್ಥೆಯೂ ಇಲ್ಲದಿರುವುದನ್ನು ವ್ಯಥೆಯಿಂದ ಸ್ಮರಿಸಿಕೊಳ್ಳುತ್ತಾರೆ ಶಾಮರಾಯಾಚಾರ್ಯರು.

ಶಾಮರಾಯಾಚಾರ್ಯರು ಎಂದೂ ನಿರಾಶಾವಾದಿಗಳಲ್ಲ. ಆಶಾವಾದಿಗಳು. ಭವಿಷ್ಯತ್ತಿನಲ್ಲಿ ಶಿಲ್ಪಶಾಸ್ತ್ರ, ಶಿಲ್ಪ-ವಾಸ್ತುಶಿಲ್ಪ ಜ್ಞಾನವನ್ನು ನೀಡುವ ಶಿಲ್ಪ ವಿದ್ಯಾಲಯಗಳು ಸ್ಥಾಪನೆಗೊಂಡು, ಪ್ರಬುದ್ಧ ಶಿಲ್ಪಿಸಂಕುಲ ಹುಟ್ಟಿಕೊಳ್ಳಬಹುದು ಎಂಬ ಆಸೆಯನ್ನು ವ್ಯಕ್ತಪಡಿಸುತ್ತಾರೆ.

●

## ಕೆ. ಶಾಮರಾಯಾಚಾರ್ಯರ ಬದುಕು - ಸಾಧನೆ

1. ಜನನ - 15-2-1926
2. ಜನನ ಸ್ಥಳ - ಕಟಪಾಡಿಯ ಹತ್ತಿರದ ಕುರ್ಕಾಲು.
3. ವಿದ್ಯಾಭ್ಯಾಸ - ಎಂಟನೇ ತರಗತಿ. ಕಡ್ಡಾಯ ಸಂಸ್ಕೃತದೊಂದಿಗೆ. ಶ್ರೀ ವೆಂಕಟರಮಣ ಹಿರಿಯ ಪ್ರಾಥಮಿಕಶಾಲೆ ಕಾರ್ಕಳ.
4. ಸಂಸ್ಕೃತ ಎಡ್ವಾನ್ಸ್ - ಪ್ರಥಮ, ದ್ವಿತೀಯ ಭುವನೇಂದ್ರ ಸಂಸ್ಕೃತ ಕಾಲೇಜು, ಕಾರ್ಕಳ (1940-1942)
5. ಮರದ ಕೆತ್ತನೆ - ತೀರ್ಥರೂಪರ ನೇತೃತ್ವ - (1942 ರಿಂದ 1947 5 ವರ್ಷ.)
6. ಕಲ್ಲಿನ ಕೆತ್ತನೆ - ರಾಷ್ಟ್ರಪ್ರಶಸ್ತಿ ವಿಜೇತ ಡಾ. ರಂಜಾಳ ಗೋಪಾಲ ಶೆಣೈಯವರ ಶಿಲ್ಪಕೇಂದ್ರದಲ್ಲಿ - ಕಲ್ಲುಮರ, ಎರಕ, ಲೋಹ (1947 ರಿಂದ 1969ರವರೆಗೆ - 21 ವರ್ಷ.)
7. ಹಸ್ತಕಲಾ ವಿದ್ಯಾರ್ಥಿವೇತನ - ರೂ.50 ರಂತೆ ಮಾಸಿಕ ವೇತನ. ಅಖಿಲಭಾರತ ಕರಕುಶಲ ಅಭಿವೃದ್ಧಿ ನಿಗಮ ಒಂದೂವರೆ ವರ್ಷ.
8. ವಿಜಯ ಶಿಲ್ಪ ಕಲಾಕೇಂದ್ರ ಸ್ಥಾಪನೆ - 1970.
9. ಶಿಲ್ಪಶಾಸ್ತ್ರ ಅಧ್ಯಯನ - ದೇವದಾಸ ಶರ್ಮರಲ್ಲಿ ಆರು ತಿಂಗಳು (1970-1971).
10. ವಿವಾಹ - 1957.
11. ವಿಜಯ ಶಿಲ್ಪಶಾಲೆ ಸ್ಥಾಪನೆ - (ಚೊಲ್ಪಾಡಿ) - 1974.
12. ಅಹಿಂಸಾ ಸ್ಥಳ - ನ್ಯೂಡೆಲ್ಲಿ ಸನ್ಮಾನ - 6-5-1990.
13. ರೋಟರಿ ಕ್ಲಬ್ ಕಾರ್ಕಳ ಸನ್ಮಾನ - 4-12-1991.
14. ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ಸ್ಥಾನ - 10.8.1994.
15. ಅಧ್ಯಕ್ಷ ಸ್ಥಾನ ಪದಗ್ರಹಣ - 14-9-1994.

16. ಜಕಣಾಚಾರ್ಯ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷ ಸ್ಥಾನ - 21-10-1995.

17. ಅಕಾಡೆಮಿ ಅಧ್ಯಕ್ಷಸ್ಥಾನಕ್ಕೆ ಪುನರ್‌ನೇಮಕ - 21-12-1995.

18. ಅಖಿಲಭಾರತ ಕಲೆ-ಕುಶಲ ಕಲೆ ನಿಗಮ- ನ್ಯೂಡೆಲ್ಲಿ, ರಾಷ್ಟ್ರಮಟ್ಟದ ಪ್ರಶಸ್ತಿ - 22-2-1996.

19. 1999ರ ಸಾಲಿನ ಜಕಣಾಚಾರ್ಯ ಪ್ರಶಸ್ತಿ ಪ್ರದಾನ - 9-3-2000.